ಅಪರಂಜಿ

ಅಕ್ಟೋಬರ್ 2006

ಕಿಳಿನಗೆಯ ಕಾರಂಜಿ



ಪ್ರಕಾಶ್
ಶಿವಕುಮಾರ್
ಬಾಗೂರು ಚಂದ್ರು
ಎಚ್. ಎಲ್. ಕೇಶವಮೂರ್ತಿ
ವನಜಾ ಚಂದ್ರಶೇಖರ್
ಗೌತಮ
ವಿ. ಪ್ರಾಣೇಶ್ ರಾವ್
ಬೇಲೂರು ರಾಮಮೂರ್ತಿ
ಎಚ್. ಗೋಪಾಲಕೃಷ್ಣ
ಪ್ರಭಾ
ಸುಗ್ಗನಹಳ್ಳಿ ಷಡಕ್ಷರಿ
ಆರೂರು ಲಕ್ಷ್ಮಣ್ ಶೇಟ್
ಕು.ಕ.
ಎಸ್. ರಾಮನಾಥ್
ದಂಡಲಿ

ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತು ವರ್ಷದ ಚಂದಾ: ರೂ.750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 24 ಸಂಚಿಕೆ - 1
ಅಕ್ಟೋಬರ್ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



○ ಪ್ರಕಾಶ್

ತಿಂಗಳಿಗೆ ಸಾವಿರ ರೂಪಾಯಿ ಏಪ್ರಿಲ್ ಒಂದರಿಂದಲೇ ಪೂರ್ವಾನ್ವಯ

- ಸುದ್ದಿ

ಅಯ್ಯೋ, ತಾರೀಖು ಬೇರೆ ಇಡಬಾರದಿತ್ತೆ!

★★★

ಬಾಹ್ಯಾಕಾಶ ಕ್ಷೇತ್ರ; ತಂತ್ರಜ್ಞರಿಗೆ ಭವಿಷ್ಯ

- ಸುದ್ದಿ

ಗ್ರಹಗಳು ಸರಿಯಾಗಿರಬೇಕು!!

★★★

ಲಕ್ಷ್ಮಿ ಎದುರು ಸರಸ್ವತಿಯನ್ನು ಮರೆತ ಜನ

- ಹೇಳಿಕೆ

ಆಹಾ!!

★★★

ಸಿಲಿಂಡರ್ ಕೊರತೆ; ಪೂರೈಕೆ ಕಾರಣ

- ಸುದ್ದಿ

ಶೆರ್‌ಲಾಕ್ ಹೋಂಸ್ ನಡುಗಿದನಂತೆ!!

★★★

'ರಾಜಕೀಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ನಿರ್ಮೂಲ ಮಾಡಲು ಯಾರಿಂದಲೂ ಸಾಧ್ಯವಿಲ್ಲ'

- ಮಾನ್ಯ ಮುಖ್ಯಮಂತ್ರಿಗಳು

ಕಠೋರ ಸತ್ಯ ಎಂದರೆ ಇದೇ!!

★★★

ಕಾಂಗ್ರೆಸ್ ಎಂಬ ಸಾಗರದಲ್ಲಿ 'ತಿಮಿಂಗಲಗಳಿವೆ'

- ದೇವೇಗೌಡರು

ಸಾಗರದ shark ಗಳೆಲ್ಲ ಮುಸಿ ಮುಸಿ ನಕ್ಕವಂತೆ!!

★★★

'ತೆಲಗಿಯ ವಿಶ್ವರೂಪ ದರ್ಶನ'

ಆಹಾ! ಶೀರ್ಷಿಕೆ ಅಂದರೆ ಹೀಗಿರಬೇಕು


★★★

ಟೋನಿ ಬ್ಲೇರ್ ಪದತ್ಯಾಗ ಘೋಷಣೆ

- ಸುದ್ದಿ

This is what you get by beating around Bush!!

★★★



ಕದಲೀಚಿತೆಯ ಕುಡಿನೋಟ

– ಶಿವು

'ಒಳ್ಳೇ ಚೆನ್ನಾಯ್ತು, ಮೊಮ್ಮಗೂ ನೆತ್ತಿ ತಂಪು ಮಾಡೋದು ನಮ್ಮೆಲ್ಲರ ಮೊದಲ ಕೆಲಸ. ಇಗೋ ಕೂಮರ್ ಮೊಮ್ಮಗೂಗೆ ಛೀರ್ಸ್' ಎನ್ನುತ್ತಾ ಟಿಮ್ ಡಕ್ಲೇ ತನ್ನ ಬಿಯರ್ ಗ್ಲಾಸನ್ನು ಎತ್ತಿ ತುಟಿಗೆ ತಗುಲಿಸಿದ. ನೆರೆದಿದ್ದ ಎಲ್ಲ ಹಿರಿಯರೂ ಛೀರ್ಸ್ ಎಂದು ದನಿಗೂಡಿಸಿದರು. ಹಸಿರು, ಬಿಳಿ ಪಟ್ಟಿಗಳ ಏಪ್ರನ್‌ಗಳನ್ನು ಧರಿಸಿದ್ದ ತರುಣಿಯರು ಬಹು ಸಡಗರದಿಂದ ನಮ್ಮೆಲ್ಲರ ಉಪಹಾರಗಳನ್ನು ತಂದಿಡಲು ಉದ್ಯುಕ್ತರಾದರು. ಕಿಟಕಿಯಾಚೆ ದೂರದಲ್ಲಿನ ಮೆನ್ಯೆ ಖಾರಿಯಲ್ಲಿ ಹಾಯಿದೋಣಿಗಳು ಸಾವಧಾನದಿಂದ ತೇಲುತ್ತಾ ದಾರಿ ಸಾಗಿಸಿದ್ದವು. ಬೆಳಗಿನ ಬಿಸಿಲು ಸುತ್ತಲಿನ ನಿಸರ್ಗದ ರಮಣೀಯತೆಗೆ ಬೆಳ್ಳಿಯ ಮೆರಗನ್ನು ನೀಡಿತ್ತು.

ನಾವೆಲ್ಲ ಅಂದು ಬೆಳಗ್ಗೆ ಸೇರಿದ್ದ ಆ ಉಪಹಾರಗೃಹ 'ದ ಆಂಖೊರೇಜ್' ಉತ್ತರ ವೇಲ್ಸ್‌ನ ನಲ್ಲಿನ ಆಂಗಲ್ಸೀ ದ್ವೀಪದಲ್ಲಿದೆ. ಇಲ್ಲಿನ ಜನರು ಈ ದ್ವೀಪವನ್ನು 'ಮಾನ್' ಎಂದು ಕರೆಯುತ್ತಾರೆ. ವೆಲ್ಷ್ ಭಾಷೆಯಲ್ಲಿ ಮಾನ್ ಎಂದರೆ ತಾಯಿ. ಇಲ್ಲಿನ ಫಲವತ್ತಾದ ನೆಲದಲ್ಲಿ ಬೆಳೆಯುವ ಧಾನ್ಯಗಳು ಇಡೀ ವೇಲ್ಸನ್ನು ಸಲಹುವುದರಿಂದ ಈ ನೆಲಕ್ಕೆ ಮಾನ್ ಹೆಸರು ನಿಂತಿದೆ. ಹಿಂದಿನ ದಿನ ನಾನು ನನ್ನ ಹಳೆಯ ಮಿತ್ರ ಅಲನ್‌ನನ್ನು ಭೇಟಿಮಾಡಲು ವೇಲ್ಸ್‌ನಲ್ಲಿನ ಕಾನ್ವೇ ಊರಿಗೆ ಬಂದಿದ್ದೆ. ಅಲನ್ನನ್ನು ನೋಡಿ ಸುಮಾರು ಒಂದು ವರ್ಷವೇ ಆಗಿತ್ತು. ಭೇಟಿಯ ಸಂಭ್ರಮದ ನಂತರ ಆತ ನಾಳೆ ಬೆಳಗ್ಗೆ ಇಲ್ಲಿನ ಫ್ರೋಬಸ್ ಸಂಸ್ಥೆಯವರು ಆಂಗಲ್ಸೀ ಅಲ್ಯೂಮಿನಿಯಂ ಕಾರ್ಖಾನೆಗೆ ಒಂದು ಭೇಟಿ ಏರ್ಪಡಿಸಿದ್ದಾರೆ. ನನ್ನ ಮಿತ್ರ ಬಿಲ್, ಫ್ರೋಬಸ್ ಸದಸ್ಯ. ಆತ ನಮ್ಮಿಬ್ಬರನ್ನೂ ಈ ವಿಹಾರಕ್ಕೆ ಆಹ್ವಾನಿಸಿದ್ದಾನೆ. ಬರ್ತೀಯಾ ಹೋಗಿ ಬರೋಣ' ಅಂತ ಕೇಳಿದ. ಒಂದು ಹೊಸ ಜಾಗವನ್ನು ನೋಡಿ, ಹೊಸ ಜನಗಳನ್ನು ಭೇಟಿಮಾಡುವ ಅವಕಾಶವನ್ನು ಯಾರಾದರೂ ತಪ್ಪಿಸಿಕೊಳ್ಳುತ್ತಾರೆಯೇ. ಒಡನೆಯೇ ಒಪ್ಪಿದೆ. ಹಾಗಾಗಿ ಇಂದು ಮುಂಜಾನೆ ನಾನು ನನಗೆ ಇಲ್ಲಿ ಸಿಕ್ಕಿದೆ (ಐ ಫೌಂಡ್ ಮೈ ಸೆಲ್ಫ್ ಹಿಯರ್).

'ಅರೆ, ನಾನು ಈ ನುಡಿಗಟ್ಟನ್ನು ಕೇಳಿಯೇ ಇರಲಿಲ್ಲ. ಏನಿದು ನೆತ್ತಿ ತಂಪು ಮಾಡೋದು?' ಸಹಜವಾದ ಕುತೂಹಲದಿಂದ ನಾನು ಟಿಮ್ ನನ್ನು ಕೇಳಿದೆ.

'ಮೊಮ್ಮಗು ಹುಟ್ಟಿದ ಸಂತೋಷಾನ ಹಂಚಿಕೊಳ್ಳೋಕ್ಕೆ ತಾತಂದಿರಿಗೂ ಒಂದು ಅವಕಾಶ ಬೇಡವೇ. ಅದಕ್ಕೆ ನಮ್ಮ ಜನ ಈ ಸಂಪ್ರದಾಯ ರೂಢಿಸಿಕೊಂಡು ಬಂದಿದ್ದಾರೆ. ನಿಜ ಹೇಳ್ಬೇಕೂ ಅಂದ್ರೆ, ಮಗುವಿನ ಇಬ್ಬರು ತಾತಂದಿರೂ ಸೇರಿ ಆಚರಿಸೋ ಸಂಪ್ರದಾಯ ಇದು. ಆದರೆ ಇಂದು ನಾವೆಲ್ಲಾ ಹೇಗಿದ್ದರೂ ತಾತಂದಿರೋ ತಾನೇ' ಎಂದ ಟಿಮ್. ಅಷ್ಟರಲ್ಲಿ ಬಿಲ್ ಫಿಷ್‌ವಿಕ್ ಬಾಯಿ ಹಾಕಿದ. 'ಕೂಮರ್, ನಿನ್ನ ಮೊಮ್ಮಗು

ಮೊದಲ ಬಾರಿ ಸೀನಿದ್ದು ನೋಡಿದ್ಯಾ?' 'ಹೂ, ನೋಡಿದ್ದೆ, ಅವಳೇನು ಬೇಕಾದಷ್ಟು ಬಾರಿ ಸೀನಿದ್ದಾಳೆ. ಯಾಕೆ?'

'ಮಗು ಮೊದಲ ಬಾರಿ ಸೀನೋವರೆಗೂ ಅದು ದೇವಲೋಕದಲ್ಲಿ ದೇವತೆಗಳ ಬಳಿ ಆಟ ಆಡುತ್ತಿರುತ್ತೆ ಅಂತ ನಮ್ಮ ವೆಲ್ಷ್ ನಂಬಿಕೆ.' ಅಂದ ಬಿಲ್.

'ನೀವೆಲ್ಲಾ ಇಷ್ಟು ಸೂಪರ್‌ಸ್ಟೀಷಿಯಸ್ ಅಂತ ನನಗೆ ತಿಳಿದಿರಲಿಲ್ಲ. ಬೇರೇ ಏನೇನು ನಂಬಿಕೆಗಳಿವೆ ನಿಮ್ಮಲ್ಲಿ?' ನಾನು ಕೇಳಿದೆ.

'ಅದನ್ನೆಲ್ಲಾ ತಿಳಿಯಬೇಕಾದರೆ ನೀನು ಕಾಲಿನ್ನನ್ನೇ ಕೇಳಬೇಕು. ಬೌಮಾರಿಸ್ ನಿಂದ ಬಂದಿರೋದು ಅವನು. ಆ ಊರಿನೋರು ಇಂತಹ ನಂಬಿಕೆಗಳಿಗೆಲ್ಲಾ ಬಹು ನಿಷ್ಠರು. ಏನಂತೀ ಕಾಲಿನ್?' ಬಿಲ್ ನನ್ನ ಪ್ರಶ್ನೆಗೆ ಉತ್ತರಿಸುವ ಭಾರವನ್ನು ಕಾಲಿನ್ನನಿಗೆ ಪಾಸ್ ಮಾಡಿದ.

'ನಂಬಿಕೆ, ಸಂಪ್ರದಾಯಗಳಿಗೇನು ಕಡಿಮೆ ವೇಲ್ಸ್ ನಲ್ಲಿ. ಸಾವಿರಾರು ಇವೆ. ಉದಾಹರಣೆಗೆ, ಬಲಗಣ್ಣು ಆದುರಿದರೆ ಅಂದು ಅದೃಷ್ಟ ಖುಲಾಯಿಸುತ್ತಂತೆ. ಹಾಗೇನೇ ಕಿವಿ ಬಿಸಿಆದರೆ ಬೇರೆಲ್ಲೋ ಯಾರೋ ನಿಮ್ಮ ಬಗ್ಗೆ ಮಾತಾಡ್ತಾಯಿದಾರೆ ಅಂತ ನಂಬ್ತೀವಿ ನಾವು. ಶುಕ್ರವಾರ ಮತ್ತು ಭಾನುವಾರ ಉಗುರು ಕತ್ತರಿಸಿಕೋ ಬಾರದು ಕೆಟ್ಟದಾಗುತ್ತೆ ಅದರಿಂದ. ಒಬ್ಬ ಮಹಿಳೆ ತನ್ನ ಎಡಗೈಯಿಂದ ಬಲಗೈನ ಉಗುರುಗಳನ್ನ ಕತ್ತರಿಸಿಕೊಂಡರೆ ಅವಳು ತನ್ನ ಗಂಡನ ಮೇಲೆ ಪ್ರಭುತ್ವ ಪಡೀತಾಳಂತೆ..........' ಕಾಲಿನ್ ತನ್ನ ಮಾತು ಮುಗಿಸುವಷ್ಟರಲ್ಲಿ ಹಸಿರು ಏಪ್ರನ್ ಮುಗುದೆಯೊಬ್ಬಳು ಬಂದು ನಮ್ಮ ಬಳಸಿದ ತಟ್ಟೆಗಳನ್ನು ತೆಗೆದುಕೊಂಡು, 'ಕಾಫಿ, ಟೀ, ಆರ್ ಮಿ?' ಎಂದು ನಗಾಡಿದಳು. ನೆರೆದಿದ್ದ ಮುದುಕಸ್ತೋಮ ಒಕ್ಕೊರಲಿನಿಂದ 'ಯೂ' ಎಂದು ಕೂಗಿತು. ಪಕ್ಕದ ಮೇಜಿನಲ್ಲಿನ ಸಭ್ಯರು ನಮ್ಮತ್ತ ಪ್ರಶ್ನಾರ್ಥಕ ದೃಷ್ಟಿ ಹಾಯಿಸಿದರು.

ನಗು ನಿಂತಮೇಲೆ ಹೆನ್ರಿ ಮಾತನಾಡಲು ಪ್ರಾರಂಭಿಸಿದ. 'ದಕ್ಷಿಣ ವೇಲ್ಸ್‌ನಲ್ಲಿ ಕೆಲವು ಭಿನ್ನವಾದ ನಂಬಿಕೆಗಳಿವೆ. ಏನಾದರೂ ಮುಖ್ಯವಾದ ವಿಷಯಾನ ನೆನಪಿನಲ್ಲಿ ಇಟ್ಟುಗೊಳ್ಳ ಬೇಕಾದರೆ ಕರವಸ್ತ್ರದ ತುದಿಯನ್ನ ಗಂಟುಹಾಕೋದು ಗೊತ್ತಿರಬಹುದು. ಅದೇಕೆ ಗೊತ್ತೇ? ನೆನಪನ್ನ ಮರೆಯುವ ಹಾಗೆ ಮಾಡೋ ಭೂತಗಳು ಆ ಕರವಸ್ತ್ರದ ಗಂಟನ್ನು ನೋಡಿ ಆ ಗಂಟಿನ ವಿಚಿತ್ರ ರೂಪವನ್ನು ಕಂಡು ಆ ರೂಪವನ್ನು ಅರ್ಥಮಾಡಿಕೊಳ್ಳುವ ಕೆಲಸದಲ್ಲೇ ಮಗ್ನರಾಗಿ ನಿಮ್ಮನ್ನು ಮರೆಸುವುದನ್ನೇ ಮರೆತುಬಿಡುತ್ತವಂತೆ. ಹಾಗೇನೇ ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೋಗುವ ಮೊದಲು ನಾವುಗಳು ಎಡಭುಜದ ಮೇಲೆ ಎರಡು ಹರಳು ಉಪ್ಪನ್ನು ಹಿಂದಕ್ಕೆ ಎರಚಿ ಹೋಗುವ ಸಂಪ್ರದಾಯ ಇದೆ. ಇದು ಯಾಕೆ ಅಂದರೆ, ಅನಿಷ್ಟವನ್ನು ಎಸಗುವ ಭೂತಗಳು ನಮ್ಮ ಎಡಬೆನ್ನ ಹಿಂದೆ ಅಡಗಿರುತ್ತವಂತೆ. ಅವುಗಳ ಕಣ್ಣಿಗೆ ಉಪ್ಪನ್ನು ಎರಚಿದರೆ ಅವು ಓಡಿ ಹೋಗುತ್ತವಂತೆ........' ಹೆನ್ರಿ ಇನ್ನೂ ಮಾತನಾಡುತ್ತಿದ್ದನೋ ಏನೋ ಅಷ್ಟರಲ್ಲಿ ನಮ್ಮ

ಯಾತ್ರಾ, ನಿರ್ವಾಹಕ 'ಕಾರ್ಖಾನೆ ಭೇಟಿಗೆ ತಡವಾದೀತು ದಯಮಾಡಿ ಏಳಿ' ಎಂದು ಗದ್ದಲಮಾಡಲು ಪ್ರಾರಂಭಿಸಿದ್ದರಿಂದ ನಾವೆಲ್ಲಾ ಆಗಲೇ ಏಳಬೇಕಾಯಿತು.

ಆಂಗಲ್ಸೀ ಅಲ್ಯೂಮಿನಿಯಂ ಲಿಮಿಟೆಡ್ ಕಾರ್ಖಾನೆಯ ವೆಲ್ಷ್ ಹೆಸರು ಅಲ್ಯೂಮಿನಿಯಂ ಮಾನ್. ವೇಲ್ಸ್ ಈ ದೇಶದ ಹಿಂದುಳಿದ ಪ್ರದೇಶಗಳಲ್ಲಿ ಒಂದು. ಹಾಗಾಗಿ ಈ ಕಾರ್ಖಾನೆ ಇಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದೆ. ಅಲ್ಯೂಮಿನಿಯಂ ತಯಾರಿಕೆಗೆ ಸಮೃದ್ಧವಾಗಿ ವಿದ್ಯುತ್ ಬೇಕಾಗುತ್ತದಂತೆ. ಇಲ್ಲಿನವರೆಗೆ ಈ ವಿದ್ಯುತ್ತನ್ನು ಇಲ್ಲಿನ ಅಣು ವಿದ್ಯುತ್ ಸ್ಥಾವರವೊಂದು ಪೂರೈಸುತ್ತಿತ್ತು. ಈಚೆಗೆ ಈ ಸ್ಥಾವರದ ಆಯಸ್ಸು ಮುಗಿಯುತ್ತಾ ಬಂದಿರುವುದರಿಂದ ಅದನ್ನು ಮುಚ್ಚುವ ಯೋಚನೆ ಸರ್ಕಾರದ ಪರಿಶೀಲನೆಯಲ್ಲಿದೆ. ವಿದ್ಯುತ್ ಸರಬರಾಜು ನಿಂತರೆ ಈ ಅಲ್ಯೂಮಿನಿಯಂ ಕಾರ್ಖಾನೆಯನ್ನು ಮುಚ್ಚಲೇ ಬೇಕಾಗುತ್ತದೆ. ಈ ಸಾಧ್ಯತೆ ಇಲ್ಲಿನ ಎಲ್ಲ ಸಿಬ್ಬಂದಿವರ್ಗದ ಮೇಲೆ ಸಾಕಷ್ಟು ಕರಾಳಛಾಯೆಯನ್ನು ಬೀರಿದ್ದು ಮೇಲುನೋಟಕ್ಕೇ ಕಾಣಿಸುತ್ತಿತ್ತು. ಒಂದು ದೃಷ್ಟಿಯಿಂದ ಈ ಭೇಟಿ ನಮ್ಮ ಕರ್ನಾಟಕದ ಕೆ.ಜಿ.ಎಫ್. ಗಣಿಗಳನ್ನು ಮುಚ್ಚುವ ಸ್ವಲ್ಪಕಾಲ ಮುಂಚೆ ಅಲ್ಲಿದ್ದ ಪರಿಸ್ಥಿತಿಯನ್ನು ನೆನಪಿಗೆ ತಂದಿತು.

ಕಾರ್ಖಾನೆಯ ಮುಂದೆ ನಮ್ಮ ಬಸ್ ನಿಂತಾಗ ಸಮಯ ಹನ್ನೊಂದು ಘಂಟೆ. ಈ ಕಾರ್ಖಾನೆಯಲ್ಲಿ ಕೆಲಸಗಾರರ ಹಾಗೂ ಭೇಟಿನೀಡುವವರ ಸುರಕ್ಷತೆಗೆ ಹೆಚ್ಚಿನ ಆದ್ಯತೆ. ಹಾಗಾಗಿ ಹೋದತಕ್ಷಣ ನಮಗೆಲ್ಲಾ ಹೆಲ್ಮೆಟ್ ಹಾಗೂ ರಕ್ಷಣಾ ಕನ್ನಡಕಗಳನ್ನು ಧರಿಸಲು ಆದೇಶ ನೀಡಲಾಯಿತು. ಅನಂತರ ಸ್ವಾಗತ ಕೊಠಡಿಯಲ್ಲಿ ಕಾರ್ಖಾನೆಯ ಕುರಿತು ಒಂದು ವಿಡಿಯೋ ಪ್ರದರ್ಶನ. ವಿಡಿಯೋ ನೋಡಿದ ನಂತರ ನಮ್ಮನ್ನೆಲ್ಲಾ ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಿ ಒಬ್ಬೊಬ್ಬ ಗೈಡ್ ಜೊತೆ ಕಾರ್ಖಾನೆಯ ವೀಕ್ಷಣೆಗೆ ಕಳಿಹಿಸಿದರು. ನಮ್ಮ ಗುಂಪಿನ ಗೈಡಿಣಿಯ ಹೆಸರು ಸೂ ಪಾವ್ನಿ. ನಾವೆಲ್ಲಾ ಒಟ್ಟಿಗೆ ಕಾರ್ಖಾನೆಯೆಡೆಗೆ ಹೆಜ್ಜೆ ಹಾಕಿದೆವು.

ಮಹಾಕರುಣ ಗೌತಮ ಬುದ್ಧನ ನಾಡಿನಿಂದ ಬಂದ ನಾನು ಖಂಡಿತವಾಗಿ ಅಲ್ಯೂಮಿನಿಯಂ ಕಾರ್ಖಾನೆಯ ವಿವರಗಳನ್ನು ನಿಮಗೆ ತಿಳಿಸಿ ನಿಮ್ಮ ಮನಕ್ಕೆ ಕ್ಷೋಭೆಯನ್ನುಂಟು ಮಾಡುವುದಿಲ್ಲ. ಬದಲಿಗೆ ಅನಿರೀಕ್ಷಿತವಾಗಿ ನಮ್ಮ ಗೈಡಿಣಿಯೊಂದಿಗಾದ ಮಾತುಕತೆಯ ಸ್ವಲ್ಪಭಾಗವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಯತ್ನವಿದು. ಕಾರ್ಖಾನೆಯ ಭೇಟಿಯನ್ನು ಮುಗಿಸಿ ಹೊರಗೆ ಬಂದಾಗ ನಮ್ಮ ಬಸ್ ಡ್ರೈವರಿಗಾಗಿ ನಾವೆಲ್ಲಾ ಸ್ವಲ್ಪ ಕಾಲ ಕಾಯಬೇಕಾಯಿತು. ಮಿಕ್ಕವರೆಲ್ಲಾ ತಮ್ಮ ತಮ್ಮಲ್ಲೇ ಹರಟೆಯಲ್ಲಿ ಮಗ್ನರಾಗಿದ್ದರಿಂದ ನಾನು ಸೂ ಜೊತೆಗೆ ಹರಟುತ್ತಾ ನಿಂತಿದ್ದೆ. ಮಾತುಕತೆಗಳ ನಡುವೆ ಸೂ ತನ್ನ ಸಂಸಾರದ ಬಗ್ಗೆ ಹೇಳತೊಡಗಿದಳು.


'ನನ್ನ ಎರಡನೆಯ ಮಗ ಪೀಟರ್ ಬಹು ಚುರುಕು. ನಿಮ್ಮಂತೆಯೇ ಅವನೂ ಕೂಡ

ಮೆಕಾನಿಕಲ್ ಇಂಜಿನೀರ್. ಮ್ಯಾಂಚೆಂಸ್ಟರಿನ ಯೂಮಿಸ್ಟ್‌ನಲ್ಲಿ ಓದಿ ಚೆನ್ನಾಗಿ ಪ್ಯಾಸ್ ಮಾಡಿದ್ದಾನೆ. ಈಗ ಅಂಗೋಲಾದಲ್ಲಿ ಕೆಲಸ ಸಿಗೋಹಾಗಿದೆ. ಅವನು ಊರು ಬಿಟ್ಟು ಹೋಗೋದು ನನಗೆ ಒಂದು ಚೂರೂ ಇಷ್ಟ ಇಲ್ಲ. ಏನು ಮಾಡೋದು. ಮಕ್ಕಳು ದೊಡ್ಡವರಾದ ಮೇಲೆ ಅವರ ದಾರಿ ನಮಗಾಗಿ ಬದಲಿಸುತ್ತಾರೆಯೇ. ಮೊದಲನೆಯವ ಸಲಿಂಗ ಕಾಮಿ. ಮನೆ ಮಾರಾಟದ ದಂಧೆಯಲ್ಲಿದ್ದಾನೆ. ಅವನ ಬಾಸ್ ಕೂಡಾ ಸಲಿಂಗ ಕಾಮಿಯೇ. ಅವರೆಲ್ಲಾ ಒಟ್ಟಿಗೇ ಸೇರಿ ಒಳ್ಳೆಯ ವ್ಯವಹಾರವನ್ನೇ ಕುದುರಿಸಿಕೊಂಡಿದ್ದಾರೆ. ನನ್ನ ಗಂಡ ತೀರಿಕೊಂಡು ಎಂಟು ವರ್ಷಗಳಾದವು. ಇಲ್ಲಿಗೆ ಐದು ಮೈಲಿ ದೂರದ ಫಾಲಿವ್ಯಾಲಿಯಲ್ಲಿ ನಮ್ಮ ಮನೆ. ಒಬ್ಬೊಂಟಿಗಿತ್ತಿಯಾಗಿ ಜೀವನ ಸಾಗಿಸಿ ನನಗೆ ಮನಸ್ಸೆಲ್ಲಾ ರೋಸಿಹೋಗಿದೆ. ಕೆಲಸ ಮುಗಿಸಿ ಸಂಜೆ ಮನೆಗೆ ಹೋದಾಗ ಕತ್ತಲೆ ಮನೆಯನ್ನು ಪ್ರವೇಶಿಸಿ ದೀಪ ಹಚ್ಚುವ ಬದಲು, ಕತ್ತಲೆಯಲ್ಲೇ ಓಡಿಹೋಗಿ ಹಾಗೇ ಹಾಸಿಗೆಯ ಮೇಲೆ ಬಿದ್ದುಕೊಳ್ಳೋಣ ಅನ್ನಿಸಿಬಿಡುತ್ತೆ. ಈಗ ಕೆಲಸ ಬೇರೆ ಹೋಗೋಹಾಗಿದೆ. ಬೇರೇ ಮದುವೆಯಾಗೋಣವೆಂದರೆ ಈ ಹಳ್ಳಿಗಳಲ್ಲಿ ಸರಿಯಾಗಿರೋರು ಸಿಗೋದೂ ಇಲ್ಲ. ಅದಕ್ಕೆಲ್ಲಾ ದೊಡ್ಡ ಪಟ್ಟಣಗಳಲ್ಲೇ ಅವಕಾಶ ಹೆಚ್ಚು. ಏನೂ ತಿಳೀತಾ ಇಲ್ಲ' ಎನ್ನುತ್ತಾ ಸೂಮುಸಿ ಮುಸಿ ಅಳಲು ಪ್ರಾರಂಭಿಸಿದಳು. ನನಗೋ ಗಾಭರಿ.

'ಎಲ್ಲ ಸರಿಹೋಗುತ್ತೆ. ಗಾಡ್ ಬ್ಲೆಸ್ ಯು' ಎಂದು ಆಕೆಗೆ ವಿದಾಯ ಹೇಳಿ ಬಸ್ಸಿನತ್ತ ಹೊರಟೆ. ಡ್ರೈವರ್ ಆಗತಾನೇ ಬಂದಿದ್ದ. ಮರುಪ್ರಯಾಣ ಪ್ರಾರಂಭಿಸಿದೆವು.



ನಾನೀಗ ತಮ್ಮನ್ನ ಏನಂದೆ ಅಂತ ಈ ರೀತಿ ಈ ಮೇಲ್‌ನಲ್ಲಿ ಸಹಸ್ರ ನಾಮ ಅರ್ಚನೆಯನ್ನು ಟೈಪ್‌ಮಾಡಿ... ನನಗೆ ಇ ಮೇಲ್ ಮಾಡಿದ್ದೀರಿ... ನಾನು ನಿಮಗೆ ಕಂಪ್ಯೂಟರ್ ಹೇಳಿಕೊಟ್ಟದ್ದೇ ತಪ್ಪಾಯಿತೇ... ಸರೋಜಮ್ಮ...



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

– ಬಾಗೂರು ಚಂದ್ರು

ಎಚ್.ಎಲ್. ಕೇಶವಮೂರ್ತಿ ಈ ತಲೆಮಾರಿನ ಹಾಸ್ಯ ಲೇಖಕರಲ್ಲಿ ಪ್ರಮುಖರು. ಶಿಕ್ಷಣ ಕ್ಷೇತ್ರದಿಂದ ಬಂದಿರುವ ಕೇಶವಮೂರ್ತಿಯ ಮೊದಲ ಪ್ರೀತಿ ಶಿಕ್ಷಣ, ಅದರ ಮೂಲ ಸ್ಥಂಭಗಳಾದ ಇಂದಿನ ಶಿಕ್ಷಕ-ವಿದ್ಯಾರ್ಥಿಗಳಾದುದು ಸ್ವಾಭಾವಿಕ. ಎಂಆರ್‌ಶ್ರೀ ಬಹಳ ಹಿಂದೆಯೇ ಪ್ರಾಥಮಿಕ ಶಿಕ್ಷಣದ ಓರೆಕೋರೆಗಳನ್ನು ನೋಡಿ ನಕ್ಕಿದ್ದರು. ಈಚೆಗೆ ಬಿಜಿಎಲ್ ಸ್ವಾಮಿ ಮೊದಲಾಗಿ ಹಲವರು ಉನ್ನತ ಶಿಕ್ಷಣ ಕ್ಷೇತ್ರದ ವಿಡಂಬನೆ ಮಾಡಿದ್ದಾರೆ. ಆದರೆ ಕೇಶವಮೂರ್ತಿ ಆಸಕ್ತಿ ಮಧ್ಯಂತರ ಶಿಕ್ಷಣ - ಹೈಸ್ಕೂಲ್, ಪಿಯೂಸಿ ಮತ್ತು ಪಾಲಿಟೆಕ್ನಿಕ್ ಮಟ್ಟದ ಶಿಕ್ಷಣ.

ಅವರು ಸೃಷ್ಟಿಸಿರುವ ಕ್ಯಾತ ಅಲಿಯಾಸ್ ಕ್ಯಾತೇಗೌಡರು ನಮ್ಮ ದೇಶದ ಇಂದಿನ ವಿದ್ಯಾರ್ಥಿಗಳ ನಿಜವಾದ ಪ್ರತಿನಿಧಿ. ಅಷ್ಟೇ ಅಲ್ಲ ಕ್ಯಾತ ಇಂದಿನ ಯುವ ಜನಾಂಗದ - ಯುವ ರಾಜಕಾರಣಿ, ಯುವ ಉದ್ಯಮಿ ಇತ್ಯಾದಿ ಎಲ್ಲಾ ಕ್ಷೇತ್ರಗಳ ಪ್ರತಿನಿಧಿಯೂ ಆಗುತ್ತಾನೆ. ಕೇಶವಮೂರ್ತಿ ಈ ಹಂತದ ವಿದ್ಯಾರ್ಥಿಗಳ ಬಗೆಗೆ ಮಾತ್ರ ಬರೆದಿಲ್ಲ. ಇಲ್ಲಿನ ಶಿಕ್ಷಕರು, ಇಂತಹ ಸಂಸ್ಥೆಗಳನ್ನು ವ್ಯಾಪಾರೀ ಸಾಧನಗಳನ್ನಾಗಿ ಮಾಡಿಕೊಂಡವರು, ಇಂತಹ ಪರಿಸ್ಥಿತಿಗೆ ಕಾರಣವಾದ ಸರ್ಕಾರ ಅದರ ಅಧಿಕಾರಿಗಳು - ಎಲ್ಲರೂ ಕೇಶವಮೂರ್ತಿ ಕಟು ವಿಡಂಬನೆಗೆ ವಸ್ತುಗಳಾಗಿದ್ದಾರೆ.

ಕೇಶವಮೂರ್ತಿ ಆಸಕ್ತಿ ಮುಂದೆ ಬೇರೆ ಕ್ಷೇತ್ರಗಳಿಗೂ ವಿಸ್ತರಿಸಿತು. ಒಬ್ಬ ವಿಮರ್ಶಕರು ಹೇಳಿರುವಂತೆ 'ಕೇಶವಮೂರ್ತಿ ಭ್ರಷ್ಟ ಸಮಾಜದ ಓರೆಕೋರೆಗಳನ್ನು ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಸೆರೆಹಿಡಿಯುತ್ತಾರೆ. ಇವರ ತಮಾಷೆಯ ಹಿಂದೆ ವಿಡಂಬನೆಯೂ ಇದೆ. ಹಾಸ್ಯದ ಕೆಳಗೆ ಟೀಕೆಯೂ ಇದೆ. ನಗುವಿನ ಪರದೆ ಜಾರಿದ ಮೇಲೆ ಗಟ್ಟಿಯಾದ ಆತಂಕ ವಿಷಾದಗಳೂ ಧ್ವನಿಸುತ್ತವೆ.'

ಈಚೆಗೆ ಅವರ ಮುಖ್ಯ ಆಸಕ್ತಿ ರಾಜಕೀಯ, ಅದರಲ್ಲೂ ಸಮಕಾಲೀನ ರಾಜಕಾರಣ ಆಗಿರುವಂತೆ ಕಾಣುತ್ತದೆ. ಹಲವು ವರ್ಷಗಳಿಂದ ಟ್ಯಾಬ್ಲಾಯ್ಡ್ ಪತ್ರಿಕೆಗಳಲ್ಲಿ ಅವರ ಅಂಕಣ ಪ್ರಕಟವಾಗುತ್ತಿದೆ. ಭಾಷೆಯ ಬಳಕೆಯಲ್ಲಿ ಟ್ಯಾಬ್ಲಾಯ್ಡ್ ಪತ್ರಿಕೆ ಮುಖ್ಯಧಾರೆಯ ಪತ್ರಿಕೆಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯ ಕೊಟ್ಟಿದೆ. ಈ ಅಂಕಣ ಬರಹಗಳ ಒಂದು ಸಕಲನ 'ಗೌರವಾನ್ವಿತ ದಗಾಕೋರರು' ಈಚೆಗೆ ಪ್ರಕಟವಾಗಿದೆ. ಅವರದೇ ಇನ್ನೊಂದು ಸಂಕಲನ 'ಜಂಟ್ಸ್ ದ್ರೌಪದಿ ವಸ್ತ್ರಾಪಹರಣವೂ' ಸಹ ಹೊಸದಾಗಿ ಪ್ರಕಟವಾಗಿದೆ.

ಇಲ್ಲಿರುವ ಬ್ಯಾಚಲರ್‌ಗೆ ಡಿ ಸೇರ್ಸಿದ್ರೆ?' ಕೇಶವಮೂರ್ತಿ ಲೇಖನಿಯ ತೀಕ್ಷ್ಣತೆಯನ್ನು ಪರಿಚಯ ಮಾಡಿಕೊಡುವ ಒಂದು ಪ್ರಾತಿನಿಧಿಕ ಬರಹ. ಒಂದನೆಯ ತರಗತಿಯಿಂದಲೇ ಕಡ್ಡಾಯವಾಗಿ ಇಂಗ್ಲೀಷ್ ಕಲಿಸಬೇಕು ಎನ್ನುವ ಬೇಡಿಕೆ ಬಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಈ ಲೇಖನ ಹೆಚ್ಚು ಪ್ರಸ್ತುತವಾಗಿ ಕಾಣುತ್ತದೆ.

ಬ್ಯಾಚಲರ್‌ಗೆ ಡಿ ಸೇರ್ಸಿದ್ರೆ?

– ಎಚ್.ಎಲ್. ಕೇಶವಮೂರ್ತಿ

ರಾಮಯ್ಯಂಗಾರ್‌ಗೆ ಹುಚ್ಚು ಹಿಡಿಯೋದೊಂದೇ ಬಾಕಿ ಇತ್ತು. ಹಾಳಾದ ಹುಡುಗ್ರು ಇಂಗ್ಲೀಷ್‌ನಲ್ಲಿ ವೀಕು. ಅವರಿಗೊಂದು ಸ್ಟ್ರಾಂಗ್‌ಡೋಜ್ ಇಂಜಕ್ಷನ್ ಕೊಡ್ಲಿ ಅಂತ ರಿಟೈರಾಗಿದ್ದ ಈ ಮನುಷ್ಯನ್ನ ತಂದಿದ್ರು. ಅವ್ರೂ ಶತಾಯುಗತಾಯು ಪ್ರಯತ್ನಿಸಿದ್ರು. ಹಗಲೂ ರಾತ್ರಿ, ಅವರ ಪೀರಿಯಡ್ನು ಇವರ ಪೀರಿಯಡ್ನೂಂತ ಅನ್ದೆ ಇಂಗ್ಲೀಷನ್ನ ಆ ಹೈಕಳ ತಲೇಗೆ ತುಂಬೋಕೆ ಇನ್ನಿಲ್ಲದ ಕಸರತ್ತು ಮಾಡಿದ್ರು. ಏನಾದ್ರೇನು? ಆದರಿದ್ರ ಮುಂಡೇವು ತಲೆ ಒಳಗೆ ಇಂಗ್ಲೀಷ್ ನಿರೋಧಕ ಮದ್ದನ್ನ ಇಟ್ಕಂಡಿದ್ವೋ ಏನೋ, ಆ ಭಾಷೆ ಅವರ ತಲೇನ ತಲುಪ್ಲೇ ಇಲ್ಲ. ಸರ್ಕಾರಿ ಶಾಲೆಯಾಗಿದ್ರೆ ಯಾವ್ದೋನ್ಗೆ ಅರ್ಥ ಆದ್ರೇನು, ಬುಟ್ರೇನು ಅಂತ, ಊದೋಶಂಖ ಊದಿ ಆರಾಮವಾಗಿರಬಹುದಾಗಿತ್ತು. ಆದ್ರೆ ಇದು ಹೇಳಿ ಕೇಳಿ ಖಾಸಗಿ ಪ್ರೌಢಶಾಲೆ, ಹೊಸದಾಗಿ ಶುರು ಆಗಿತ್ತು. ಗಿರಾಕಿಗಳ್ನ ಸೆಳಿಯೋದೆ ಅದರ ಪವಿತ್ರ ಕರ್ತವ್ಯ. ಈ ಸೆಳ್ತ ಇದ್ದದ್ದು ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶದ ಮೇಲೆ.

'ನಂಶಾಲೇಲಿ ನೂರಕ್ಕೆ ನೂರು ಪಾಸಾಗವ್ರೆ.' ಅಂದ್ರೆ ಅದರ ಖದ್ರೇ ಬೇರೇ. ಜನ ನಾನು ತಾನೂಂದ ಮೇಲ್ಬಿದ್ದು ಬಂದು, ಹೇಳಿದಷ್ಟು ಡೊನೇಷನ್ ಪೀಕಿ, ಮಕ್ಕಳನ್ನ ಸೇರುಸ್ತಾರೆ. ಫಲಿತಾಂಶ ಬೀಳ್ತಾಯ್ತೊ ಈ ಶಾಲೆಕಡೆ ಯಾರೂ ಕ್ಯಾರೆ ಅಂತ ತಿರ್ಗಿ ನೋಡಲ್ಲ. ಪರೀಕ್ಷೆಲಿ ಕಾಪಿ ಹೊಡ್ಸಿ ಸೆಂಟ್ ಪರ್ಸೆಂಟ್ ರಿಸಲ್ಟು ಅಂತ ಮೆರೀಬಹುದು ನಿಜ. ಹಂಗೆ ಮಾಡೋರೂ ಇದಾರೆ. ಈ ಶಾಲೆಯೋರೂ ಮಾಡೋಕೆ ಸಿದ್ಧ ಇದ್ರು. ಆದ್ರೆ, ಒಂದು ರೀತಿ ಅನುಮಾನ ಪ್ರಕೃತಿ ಜನ. ಇತ್ತೀಚೆಗೆ ಎಂತೆಂತವವ್ರೋ ಅಧಿಕಾರಿಗಳಾಗಿ ಬರ್ತಿವಾವೆ. ಅವು ಪ್ರಿನ್ಸಿಪಲ್ಲು ಗ್ರಿನ್ಸಿಪಲ್ಲು ಅಂತ ಬೊಗಳ್ತಾ ಇರ್ತವೆ. ಅಂತಹವೇನಾದ್ರೂ ಬಂದು ಕಾಪಿ ಹೊಡೆಯೋಕೆ ಅವಕಾಶಾನೆ ಕೊಡ್ದೇಹೋದ್ರೆ, ಗತಿ ಏನು ಅಂಬೋ ಚಿಂತೆ. ಈ ಫ್ಯಾಕ್ಟರ್ ಆಫ್ ಸೇಫ್ಟಿ ಅಂತಾರಲ್ಲ ಹಂಗೆ ಈ ಹುಡುಗರನ್ನ ಯಾವ ಕಡೇಗಾದ್ರೂ ಆಗ್ಲಿ, ಆದಷ್ಟು ತಯಾರಿ ಮಾಡಿ ಕಳಿಸೋದು ವಾಸಿ ಅಂತ ಭಾವಿಸಿದ್ರು. ಭಾವನೇನೆ ರಾಮಯ್ಯಂಗಾರ್‌ನ ತರ್ಸಿತ್ತು. ಇತ್ಲಾಗಿ ಇಂಗ್ಲಿಷ್ ಕಲ್ಸಿ ಅಂತ ಆಡಳಿತ ವರ್ಗದೋರ ವರಾತ; ಅತ್ಲಾಗಿ ಇಂಗ್ಲಿಷ್ ಕಳ್ಸಿ ಅಂತ ಹುಡುಗ್ರು. ಈ ಇಬ್ಬರ ಮಧ್ಯೆ ಸಿಗಾಕ್ಕಂಡು ಪಾಪಿ ಒದ್ದಾಡೋ ಹಂಗಾಗೋಗಿತ್ತು.

ಪರೀಕ್ಷೆ ಹತ್ತಿರಕ್ಕೆ ಬರ್ತಿತ್ತು. ಯಥಾಸ್ಥಿತಿ ಅಯ್ಯಂಗಾರ್ರು ಪಾಠ ಮಾಡ್ತಾ ಇದ್ರು. ಹುಡುಗ್ರು ಶೂನ್ಯ ದೃಷ್ಟೀಲಿ ಇವರನ್ನ ನೋಡ್ತ ಕುಂತಿದ್ವು. ಪಾಠದ ಮಧ್ಯೆ. "defame" ಅನ್ನೋ ಪದ ಬಂತು. ಅದೆಷ್ಟೋ ಸಲ ಈ ಹಿಂದೆ ಇದಕ್ಕೆ ಅರ್ಥ ಹೇಳಿದ್ರು. ಈಗ ಹುಡುಗರನ್ನೇ ಕೇಳಿದ್ರು.

"defame" ಅಂದ್ರೇನು?

ಬಾಯಿಬೀಗ ಹಾಕ್ಕಂಬಿದ್ವೇನೋ. ಒಂದೂ ಬಾಯೇ ಬಿಟ್ಟಿಲ್ಲ. ಅಯ್ಯಂಗಾರ್ರ್ಗೆ ಅಳು ಬರೋದೊಂದೇ ಬಾಕಿ. ಆದ್ರೂ, ತಡ್ಕಂಡ್ರು, ಬೇರೆ ಮಾರ್ಗ ಹಿಡಿದ್ರು. ಪಾಠ ಹೇಳೋ ವರಸೇನ ಬದಲಾಯಿಸಿದ್ರು.

'ಫೇಮ್ ಅಂದ್ರೇನು? ಖ್ಯಾತಿ ಅಂತ. ಅದಕ್ಕೆ ಡಿ ಸೇರ್ಸಿದ್ರೆ ಏನಾಗ್ತದೆ?'

'ಡೀ ಫೇಮ್'

ಹುಡುಗ್ರು ಕೋರಸ್ಸಿದ್ರು.

'ಗುಡ್, ವೆರಿಗುಡ್. ಡೀ ಫೇಮ್ ಅಂದ್ರೇನು? ಅಪಖ್ಯಾತಿ. ಅಂದ್ರೆ ಖ್ಯಾತಿಗೆ ವಿರುದ್ಧವಾದ್ದೂ. ಇದು ಹ್ಯಾಗೆ ಬಂತು? ಫೇಮ್‌ಗೆ ಡಿ ಸೇರಿಸಿದ್ದಕ್ಕೆ. ಹ್ಯಾಗೆ ಬಂತು ಹೇಳಿ?'

'ಫೇಮ್‌ಗೆ ಡೀ ಸೇರ್ಸಿದ್ಕೆ'

ಅಯ್ಯಂಗಾರ್ರ್ಗೆ ಸ್ವರ್ಗ ಮೂರೇ ಗೇಣು ಅನ್ನುಸ್ತು. ಒಂದು ಪದದ ಹಿಂದೆ ಸೇರ್ಸಿದ್ರೆ, ಅದರ ವಿರುದ್ಧ ಪದ ಬರ್ತದೆ ಅನ್ನೋದನ್ನ ಮನದಟ್ಟು ಮಾಡಿದ್ರು.

ಒಂದು ದಿನ ಅವರ ಶಿಷ್ಯಕೋಟೀಲಿ ಒಬ್ಬನಾದ ಕ್ಯಾತೇಗೌಡ ಇದ್ದಕ್ಕಿದ್ದಂತೆ ಅವರೆದ್ರು ಪ್ರತ್ಯಕ್ಷ ಆದ.

'ಏನೋ ಕ್ಯಾತ, ಎಲ್ಲಿದೀಯೋ'

ಪ್ರೀತಿಯಿಂದ ಕೇಳಿದ್ರು ಮೇಷ್ಟ್ರು.

'ಎಲ್ಲೂ ಇಲ್ಲಾ ಸಾ. ಈ ಸ್ಕೂಲ್ನಲೆ ಸೇರುಮಾಂತ ಅರ್ಜಿ ಹಾಕಿದ್ದೆ'

'ಹೂಂ, ಗೊತ್ತು'

'ನಂಗೆ ಸಿಗ್ಲಿಲ್ಲ ಸಾ'

'ಅದೂ ತಿಳೀತು'

'ಇಗ್ಯಾಕ್ಯಯ್ತು ಸಾ?'

ಶಾಲೆ ನಡೆಸುತ್ತಿದ್ದೋರು ಕ್ಯಾತನ ಜಾತಿಯವರೇ. ಅವನ ಮುಂದೆ ಏನೋ ಹೇಳಿ, ಎತ್ತೆತ್ತಾಗೋ ತಿರುಕ್ಕಂಡ್ರೆ ಏನ್ ಮಾಡೋದು ಅನ್ನೊ ಚಿಂತೆ ಅವುರ್ಗೆ. ಬೆಣ್ಣೇಳಿ ಕೂದ್ರೂ ತೆಗ್ದಂಗೆ ಹೇಳಿದ್ರು-

'ಮೆರಿಟ್ ಮೇಲೆ ಕೊಟ್ಟವ್ರಂತೆ'

'ಯಾವ್ದೀಮೆ ಮೆರಿಟ್ಟು ಸಾ? ಮಾನವೀಯತೆ, ಹೃದಯವಂತಿಕೆ ಯಾವ್ದೂ ಬ್ಯಾಡ್ವ ಸಾ?'

ಕ್ಯಾತನ ಮಾತು ಕೇಳಿ ಮೇಷ್ಟ್ರು ಡಂಗಾಗೋದ್ರು. ಈ ಇಸಮ್ಮು ಪ್ರಗತಿಪರವಾದಿಗಳ ಭಾಷಣಾನ ಇತ್ತೀಚೆಗೆ ಯದ್ವಾತದ್ವಾ ಕೇಳ್ತಿರಬೇಕು ಅನ್ನುಸ್ತು. ಆ ಜಾತಿ ಜನ ಕಂಡ್ರೇ ಇವರ್ಗೇನೋ ಒಂಥರ ಪುಕ್ಲು. ಅದ್ಕೇ ಬಾಯೇ ಬುಡ್ಲಿಲ್ಲ. ಅವನೇ ಮುಂದುವರೆಸಿದ:

'ಈಗ ಆಯ್ಕೆ ಮಾಡವ್ರಲ್ಲ ಅವ್ಯಾರು?'

'ಯಾರೋ ನಿಮ್ಮೂರ ಕಡೆಯೋನೆ ಅಂತೆ'

'ಊರ್ನ್ಯಾವ್ರೋನ್ಸಾ ಕೇಳ್ದೋನು? ಅವನೇನಾಗವ್ನೆ ಹೇಳಿ.

ಬ್ಯಾಚಲರ್ರು, ನಾನು ಏನಾಗಿವ್ನಿ ಹೇಳಿಸಾ?'

ಅಯ್ಯಂಗಾರ್ರು ಮೇಲಿಂದ ಕೆಳಗೆ ಅವ್ನನ್ನ ಅಳುದ್ರು. ಅವ್ನು ಏನುತ್ರ ಬಯಸ್ತಿದ್ದಾನೆ ಅಂತ ಗೊತ್ತಿದ್ರೆ ಅದ್ನೇ ಹೇಳ್ತಿದ್ರು. ತಿಳೀಲಿಲ್ಲ. ಮೌನದ ಮರೆ ಹೋದ್ರು.

'ನಾನು ಸಾ, ನಾನು ಡಿ ಬ್ಯಾಚಲರ್ರು ಸಾ, ಡಿ ಬ್ಯಾಚಲರ್ರುಗಳ್ನ ಕಂಡಿದ್ರು.

ಅಷ್ಟೇ ಯಾಕೆ? ಸಾರ್ವಜನಿಕವಾಗಿ ಸಭ್ಯ ಅಂತ ಸ್ವತಃ ಅವರೇ ಸೋಗು ಹಾಕ್ತ ಒಂದೆರಡು ಮೂರು ಸಲ ಕ್ಯಾತ ಹೇಳಿದ ಗುಂಪಿಗೆ ಸೇರಿದ್ರು. ಸೇರಿದ ಮೇಲೆ, ಇತರರಿಗೆ ಬೇಕಾದ್ದ ನೀಡಬೇಕಾದ್ದು ನನ್ನ ಧರ್ಮ, ಆಕೆಗೆ ಗಂಡಿನ ಸಖ್ಯ ಬೇಕಾಗಿತ್ತು. ಅದನ್ನ ನೀಡ್ದೆ ಅದ್ರಲ್ಲಿ ತಪ್ಪಿಲ್ಲ ಅಂತ ಸಮಾಧಾನ ಮಾಡಿಕೊಂಡು ಇದ್ರು. ಬಹಳ ಜನಕ್ಕೆ ತಮಗೆ ಬೇಕಾದ್ದನ್ನು ರಾಮಯ್ಯಂಗಾರ್‌ರಿಂದ್ಲೇ ಪೂರೈಸಿಕೊಳ್ಳಬೇಕು. ಅನ್ನೋ ಉತ್ಕಟೇಚ್ಛೆ ಇಲ್ಲದ್ದರಿಂದ ಅವರ ಸೇವೆ ಎರಡು ಮೂರಕ್ಕೆ ನಿಂತಿತ್ತು. ಆದ್ರೆ ಇದೆಲ್ಲ ಮುಚ್ಚುಮರೇಲಿ ನಡೆಯಬೇಕಾದ ಸಂಗತಿ. ಅಂತಹದ್ದರಲ್ಲಿ ತಮ್ಮ ಶಿಷ್ಯ ಹಿಂಗೆ ರಾಜಾರೋಷವಾಗಿ ಹೇಳ್ತಿರೋದನ್ನ ಕೇಳಿ ದಂಗಾಗೋದ್ರು. ತಮ್ಮ ಕಿವೀನೇ ನಂಬ್ದೆ ಕೇಳಿದ್ರು.

'ನೀನು ಏನೊಂದೆ ಕ್ಯಾತ?'

'ಡಿ ಬ್ಯಾಚಲರ್ರು ಸಾ?'

'ಹಂಗಂತೀಯಾ?'

'ಹೂಂ ಸಾ, ಸತ್ಯಾಗ್ಲೂವೆ. ನಂಗ್ ಕೆಲ್ಸ ಕೊಡ್ಬೇಕೋ. ಅವುನ್ಗೆ ಕೊಡ್ಬೇಕೊ ನೀವೇ ಹೇಳಿಸಾ.'

ಮತ್ತೆ ಅಯ್ಯಂಗಾರ್ರಿಗೆ ತಕ್ಲೀಫ್ ಆಯ್ತು. ಅವರ ಒಳಮನಸ್ಸು ಛೀ ಇಂತಹ ಸತ್ಯಸಂಧನಿಗೇ ಕೆಲ್ಸ ಕೊಡ್ಬೇಕಿತ್ತು ಅಂತು. ಆದ್ರೂ ಹಾಳಾದ ಸಂಶಯ. ಕೇಳಿದ್ರು

'ಕ್ಯಾತ ನೀನು ಡಿಬ್ಯಾಚಲರ್ರು ಅಂದೆ, ಅಲ್ವಾ?'

'ಹೂಂಸಾ'

'ಹಂಗಂದ್ರೇನು?'

'ಏನ್ಸಾ, ನೀವು ನಂಗೆ ಇಂಗ್ಲಿಷ್ ಕಲುಸ್ದೋರು. ನೀವೇ ಹಿಂದೆ ಕೇಳ್ತಿದೀರಲ್ಲ? ಬ್ಯಾಚಲರು ಅಂದ್ರೇನ್ಸಾ?'

'ಬ್ರಹ್ಮಚಾರಿ, ಮದುವೆ ಆಗದವ ಅಂತ'

'ಸರಿಸಾ. ಅದ್ಕೆ ಡಿ ಸೇರ್ಸುದ್ರೆ ಏನಾಯ್ತುದೆ ಸಾ? ಡಿಬ್ಯಾಚಲರ್ರು ಅಂದ್ರೆ ಬ್ಯಾಚಲರ್ ಅಲ್ದೋನು. ಮದ್ವೆ ಆದೋನು, ಸಂಸಾರಿ ಅಂತಾಲ್ವಸಾ?'

★★★

ಮಾಯಾವಿ ಮರಗುಳಿ

- ವನಜಾ ಚಂದ್ರಶೇಖರ್

ವಸಂತಮಾಸ, ಎಲ್ಲೆಲ್ಲೂ ಹಸಿರೇ, ಆ ತಂಪಿನನುಭವ, ಬೆಳಿಗ್ಗೆ 10 ಗಂಟೆಯ ಒಳಗೆ. ಮತ್ತೆ ಸಂಜೆ ಆರರ ನಂತರ, ಹಸಿರು ಹಬ್ಬದ ಆಹ್ಲಾದ. ಈ ಮಧ್ಯೆ ಮಟ ಮಟ ಮಧ್ಯಾಹ್ನ 1 ಗಂಟೆಲಿ ನನ್ನ ಆತ್ಮೀಯ ಗೆಳತಿ ವಸಂತಿಯ ಆಗಮನ. ನಮ್ಮ ಮನೆಯ ಒಳ ಪ್ರವೇಶಿಸಿದ್ದೆ ತಡಾ ಗೋಳೋ ಎಂದು ಅಳಲಾರಂಭಿಸಿದಳು ಮೊದಲು ಒಂದು ಲೋಟ ನಿಂಬೆ ಪಾನಕ ಮಾಡಿಕೊಟ್ಟೆ, ನಂತರ ಸಮಾಧಾನಿಸಿ, ಏಕೆ? ಏನಾಯ್ತು ಮನೆಯಲ್ಲೇನಾದರೂ ಸಮಸ್ಯೆಯೆ? ಎಂದೆ.

ನಿಂಬೆ ಪಾನಕ ಹೊಟ್ಟೆಗೆ ಹೋದದ್ದೇ, ಮನಸ್ಸಿಗೆ ಸಮಾಧಾನವೆನಿಸಿರಬೇಕು, ಪುಂಖಾನು ಪುಂಖವಾಗಿ ಹರಿದು ಬಂತು ಹೃದಯಾಂತರಾಳದ ನೋವು!! ನೋಡೇ ವನಜಾ, ನನ್ನ ಅತ್ತೆಯವರು ಇತ್ತೀಚೆಗೆ ಏನೋ ವಿಚಿತ್ರವಾಗಿ ಆಡ್ತಾರೆ, ಇದುವರೆಗೂ ಸಣ್ಣಪುಟ್ಟದು ಇತ್ತು, ಏನೋ ಎಲ್ಲಾರ ಮನೆಯ ದೋಸೆಯೂ ತೂತೆ. ಕೆಲವು ಗಂಡಸರು ತಾಯಿ ಮಾತಿಗೆ ತಾಳ ಹಾಕ್ತಾರೆ, ಇನ್ನು ಕೆಲವರು ತಾಯಿಯನ್ನ ಹೆಂಡ್ತಿಯನ್ನ ಪರೀಕ್ಷಿಸಿ ಆಮೇಲೆ ವಿಚಾರಿಸುತ್ತಾರೆ. ಇದುವರೆಗೂ ಆ ನಿಟ್ಟಿನಲ್ಲಿ ನನ್ನ ಭಾಗಕ್ಕೆ ಆ ದೈವದ ಸಹಾಯವಿತ್ತು, ಈಗ ಒಂದು ವಾರದಿಂದ ತೀರಾ ಹದಗೆಟ್ಟಿದೆ ಎಂದೆನ್ನುತ್ತಾ ಮತ್ತೆ ಅಳುವಿನ ಲೋಕಕ್ಕೆ ಜಾರಿದಳು.

ಏಕೆ? ಏನಾಯ್ತೇಗಾ? ಮತ್ತದೇ ಪ್ರಶ್ನೆ ನನ್ನದು.

ಮೊನ್ನೆ ಮಧ್ಯಾಹ್ನ 2 ಗಂಟೆಗೆ ಮಾಮೂಲಿನಂತೆ ಅವರೇ ಬಡಿಸಿಕೊಂಡು ಊಟ ಮಾಡಿದರು, ಹಾಡಿ, ಹಾಡಿ ಹೊಗಳಿದರು, ಏಯ್ ವಸಂತ, ಬೆಂಡೆಕಾಯಿ ಗೊಜ್ಜು ಅದೆಷ್ಟು ಸೊಗಸಾಗಿದೆ, ತಿಳಿ ಸಾರಂತೂ ಅಮೃತ ಅಮೃತ ಇದ್ದಂತೆ ಇದೆ. ಈ ಊಟವನ್ನು ನಿನ್ನ ಮಾವ ತಿಂದಿದ್ದರೆ ಅದೆಷ್ಟು ಸಂತೋಷಪಡುತ್ತಿದ್ದರೋ ಕಾಣೆ, ಊಟವಿರಲಿ, ನಿನ್ನಂತ ರೂಪವತಿ ಸೊಸೆ ನೋಡುವ ಪುಣ್ಯವೂ ಇಲ್ಲದೆ ಹೋಯ್ತು. ಮುಂದಿನ ತಿಂಗಳಿಗೆ ಅವರು ಸತ್ತು 15 ವರ್ಷವೇ ಆಗುತ್ತೆ, ಹಾಗೆ ಅದೂ, ಇದು ಮಾತಾಡುತ್ತಾ ಹೊಟ್ಟೆ ತುಂಬಾ ಉಂಡು, ಹಾಲಲ್ಲೆ ಚಾಪೆಮೇಲೆ ಮಲಗಿ ಒಂದು ದೊಡ್ಡ ಜೊಂಪು ತೆಗೆದು ಶಾಲೆಯಿಂದ ಬಂದ ನಮ್ಮ ಮಗಳು ಮಲ್ಲಿಕಾಳ ಜೊತೆ ಹಲುಗಣಿಮಣೆ ಆಟವಾಡಿ (ಚೆನ್ನಾಮಣೆ), ಹೊರ ಜಗಲಿಯಲ್ಲಿ ಕುಳಿತು ಬಂದು ಹೋದವರೆಲ್ಲರ ಆರೋಗ್ಯ ವಿಚಾರಿಸುವಲ್ಲಿ ಹೊತ್ತು ಮುಳುಗುವ ವೇಳೆಯಾಯ್ತು, ನನ್ನ ವಾಸು ಒಳ ಬಂದರು, ಎಲ್ಲಿತ್ತೋ ನನ್ನತ್ತೆಯವರ ಆವೇಶ! ನೋಡೋ ವಾಸು, ನಿನ್ನ ಹೆಂಡ್ತಿ ನನ್ನ ಬೆಳಗಿನಿಂದಾ

ಉಪವಾಸ ಕೆಡಪಿದ್ದಾಳೆ. ನೀನಾದರೂ ನಿನ್ನ ಊಟದಲ್ಲಿ ಸ್ವಲ್ಪ ನನಗೆ ಹಾಕೊ ಎಂದು ಅವರ ತಟ್ಟೆ (ಬೆಳ್ಳಿತಟ್ಟೆ) ಇಟ್ಟುಕೊಂಡೆಬಿಟ್ಟರು, ನನ್ನವರೋ ಊಟದ ಬದಲು ನನ್ನನ್ನೆ ತಿನ್ನುವಂತೆ ನೋಡುತ್ತಾ, ಒಂದೂ ಮುಂದು ನೋಡದೆ, ವಾಚಾಮಗೋಚರ ಪ್ರಾರಂಭಿಸಿಯೇ ಬಿಟ್ಟರು ಅಷ್ಟೋತ್ತರವ. ಅತ್ತೆ ತಿರುಗಿ ಅವರಮ್ಮನ್ನ ಕೇಳಿದರು, ಅಲ್ಲಮ್ಮ ನಾನು 15 ವರ್ಷದಿಂದಾ ಒಂದೇ ಹೊತ್ತು ಊಟ ಮಾಡ್ತಿದ್ದೆ, ಅದೂ ಅಲ್ಲದೇ ಮುತ್ತಗದ ಎಲೆ ಹಚ್ಚಿ, ಎಲೆಲಿ ಊಟ ಮಾಡ್ತಿದ್ದೆ, ಈಗಿನ್ನೂ ಆರುಗಂಟೇನೂ ಆಗಿಲ್ಲಾ....

''ಅಲ್ವೋ ವಾಸು, ಬೆಳಗ್ಗೆ ಊಟ ಮಾಡಿಲ್ಲಾ, ಅದೇ ಊಟ ಈಗ ಮಾಡ್ತಿನಿ'' ಅಂತ ಮಾಮೂಲಿ ಹೇಳುವಂತೆ, ಆರಾಮವಾಗಿ ಮಾತಾಡುತ್ತಾ ಹಾಗೆ ಮಂದಲಗ (ಚಾಪೆ) ಹಾಸಿ, ಮೇಲೆ ಹೊದಿಸಿದ ಹಂಚನ್ನೆ ಬಿಟ್ಟಸುತ್ತಾ ಮಲಗಿಬಿಟ್ಟರು! ಅಲ್ಲಿಂದಾ ಮುಂದ ಯಾರ ಪತ್ತಿರವೂ ಮಾತಿಲ್ಲಾ.

ಬೆಳಗ್ಗೆ ಸ್ನಾನ ಮಾಡಿ, ಒಂದು ಲೋಟ ಹಾಲು ಹಿಡಿದು ದೇವರ ಮನೆಗೆ ಹೋಗಿ ದೇವರ ಮುಂದಿಟ್ಟು ನಂತರ ತುಳಸಿ ಪೂಜೆ ಮಾಡಿ ಬಂದು, ನನ್ನ ಕೈಗೂ ಅದನ್ನೆ ಒಂದು ಹನಿ ಸೋರಿಸಿ ತೀರ್ಥ ಎಂದರು, ಉಳಿದ ಹಾಲನ್ನ ಪೂರ್ತಿ ಕುಡಿದು ಮತ್ತೆ ಮಾಮೂಲಿ ಜಾಗದಲ್ಲಿ ಮಲಗಿದರು, ಮತ್ತೆ ಎಚ್ಚರವಾದ ಮೇಲೆ ಅದೇ ರಾಗ, ನನಗೆ ಬೆಳಗ್ಗೆ ಕಾಫಿನೇ ಕೊಟ್ಟಿಲ್ಲಾ, ಹಾಗೆ ಹೀಗೆ ಎನ್ನುತ್ತಿರುವಾಗಲೇ ಅವರ ಗೆಳತಿ ಸಾವಿತ್ರಮ್ಮನ ಆಗಮನ, ಏನೆ ಸಾವಿತ್ರಿ, ಇಷ್ಟು ಸರಿರಾತ್ರಿಲಿ ಬಂದಿದ್ದೀಯಾ? ಒಬ್ಬಳೆ ಬಂದ್ಯಾ? ನಿನ್ನ ಸೊಸೆನೊ ಮಗನ್ನೋ ಕರಕೊಂಡು ಬರಬೇಕಿತ್ತು ಅಂದರು.

ಸಾವಿತ್ರಮ್ಮನಿಗೆ ವಿಪರೀತ ಗಾಬರಿ!!! ಏನೆ ಕಾಮಾಕ್ಷಿ ಇನ್ನೂ ಮೂರು ಗಂಟೆಯೂ ಆಗಿಲ್ಲಾ ಆಗಲೇ ಸರಿರಾತ್ರಿಯೆನ್ನುತ್ತಿ? ಮೈಗೆ ಆರಾಮ ಇದೆ ತಾನೆ?

ಗೆಳತಿಯರಿಬ್ಬರ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ನಾನು ಕಾಫಿ ಮಾಡಿ ಇಬ್ಬರ್ಗು ಕೊಟ್ಟು ಅಲ್ಲೆ ನಿಂತೆ ಅಷ್ಟರಲ್ಲೆ ನನ್ನತ್ತೆ ಸರಿಯಾಗಿ ಮಾಮೂಲಿಯಂತೆ ಹರಟೆ ಹೊಡೆಯಲಾರಂಭಿಸಿದರು.

ಗೆಳತಿ ಸಾವಿತ್ರಮ್ಮನವರ ಹತ್ತಿರ ಅವರ ಮರಗುಳಿತನವನ್ನು ಬೇಸರವಿಲ್ಲದೆ, ನಿಸ್ಸಂಕೋಚವಾಗಿ ಹೇಳಿಕೊಳ್ಳತೊಡಗಿದರು, ನೋಡು ವಯಸ್ಸಾದ ಮೇಲೆ ಹೆಚ್ಚಿಗೆ ಇರಬಾರದು, ನಿನ್ನೆ ಏನಾಯ್ತು ಅಂದರೆ ಸಂಜೆ ಮಗ ಮನೆಗೆ ಬಂದ, ಸೊಸೆ ಕಾಫಿ ಕೊಟ್ಟಳು, ಆಗ ಮಾಮೂಲಿನಂತೆ ಮಗ ಅಮ್ಮ ನೀನು ಕಾಫಿ ಕುಡಿದಾಯ್ತೊ? ಅಂದಾ. ನಾನು ಇಲ್ಲಾ ಅಂದೆ, ಏಯ್ ಅಮ್ಮಂಗೆ ಕಾಫಿನೆ ಕೊಟ್ಟಿಲ್ವಂತೆ? ಅವಳಿಗೂ ತಾ ಅಂದ. ಸೊಸೆಗೆ ಸಿಟ್ಟು ಅವಮಾನ ಒಟ್ಟಾಗಿ, ಏನಮ್ಮ! ನೀವು ಆಗಲೇ 3 ಗಂಟೆಲಿ ತಲೆ ನೋಪಿದೆ ಕಾಫಿ ಕೊಡು ಅಂತಾ ಕೇಳಿ ಇಸ್ಕೊಂಡ್ರಿ ಅಂದ್ಲು..

ಏನಪ್ಪಾ ಅದು ನನ್ನ ದಿನ, ಈ ದಿನ ನೀನು ಕೊಟ್ಟೆ ಇಲ್ಲಾ ಅಂದೆ, ಆಗ ತಕ್ಷಣಾ ಸೊಸೆ ಹುಟ್ಟಿ ಬಡವೆ ಎಲ್ಲಾ ಜ್ಞಾಪಕಕ್ಕೆ ತಂದ್ರು, ಈದಿನ ಕಾಫಿ ತುಂಬಾ ರುಚಿ ಇದೆ, ಇದು ಚಿಕ್ಕಮಗಳೂರು ಪ್ಲಾಂಟೇಷನ್ ಅಂತ್ರ, ಇಲ್ಲಾ ಇದು ಬೇಲೂರು ವೈಕುಂಠ ಬೀದಿಲಿದ್ದ ವಿಠಾರದಾ ಕಾಫಿ ವರ್ಕ್ಸ್‌ನದು, ನಿನ್ನೆ ರ್‍ಯಾಮಣ್ಣ ಬಂದಿದ್ರ, ಅವ ತಂದಿದ್ದು ಅಂದೆ, ಅಂತೆಲ್ಲಾ ಹೇಳಿ ಎಲ್ಲಾ ಮಾತನ್ನು ಜ್ಞಾಪಿಸಿ ಕೊನೆಗೆ ನಾನು ಹೌದು ಹೌದು, ಅಂದು ಒಪ್ಪಿಕೊಂಡಿದ್ದಲ್ಲದೆ ತಲೆದಿಂಬಿಯಲ್ಲಿದ್ದ ಲೋಟಾನು ಸಾಕ್ಷಿ ಹೇಳಿತು, ಹೀಗೆ ನಿತ್ಯವೂ ಏನಾದರೂ ಒಂದು ನೆಪದ ಮಗನಿಗೆ ಸೊಸೆ ಮೇಲೆ ಕೋಪ, ನನ್ನಿಂದಾಗಿ ಅವರಿಬ್ಬರಿಗೂ ಜಗಳ, ಒಟ್ನಲ್ಲಿ ಹೆಚ್ಚಿಗೆ ದಿನ ಇದ್ದರೆ ಏನೇನು ಆಗುತ್ತೋ ತಿಳಿಯಲ್ಲಾಂತ ಹೇಳುತ್ತಿರುವಾಗಲೇ ನನ್ನತ್ತೆಯವರು ಮತ್ತೆ ಊಟ ಮಾಡಬೇಕೆಂದು ಹಾಗೆ ಸ್ನಾನ ಮಾಡಿ ಬರುವೆ ಎಂದು ಬಚ್ಚಲ ಮನೆಯತ್ತ ನಡೆದರು, ಗೆಳತಿ ಸಾವಿತ್ರಮ್ಮ ನನಗೆ ಸಮಾಧಾನ ಹೇಳಿ ಹೊರಟರು, ನೋಡಮ್ಮಾ ವಸಂತಿ, ವಯಸ್ಸಾದ ಮೇಲೆ ಇದೆಲ್ಲಾ ಮಾಮೂಲಿ ನಿನ್ನ ಅತ್ತೆ ಮೇಲೆ ಸಿಟ್ಟಾಗಬೇಡ ಎಂದರು, ಅಂದಳು ಗೆಳತಿ ವಸಂತಿ.

ಮತ್ತೇಕೆ ನೀನು ಬೇಸರ ಮಾಡಿಕೊಂಡಿದ್ದೀಯಾ? ಅಂದೆ.

ಅಯ್ಯೋ! ಈ ಪುರಾಣವೆಲ್ಲಾ ನನ್ನ ಗಂಡನಿಗೆ ಹೇಗೆ ಅರ್ಥವಾಗಬೇಕು? ನಾನು ಎಷ್ಟು ಹೇಳಿದ್ರೂ, ನನ್ನ ಮೇಲೆ ಅನುಮಾನ ಎಂದು ಬೇಸರದಿಂದ ಕಣ್ಣು ತುಂಬಿಕೊಂಡಳು, ಅಷ್ಟರಲ್ಲಿ ವಸಂತಿಯ ಮಗ ವರುಣ್ ಓಡೋಡಿ ಬಂದು, ಅಮ್ಮಾ! ಅಜ್ಜಿ ಅಜ್ಜನ್ನ ಕರೆದುಕೊಂಡು ಬರ್ತೀನೀಂತಾ ಬಸ್‌ಸ್ಟಾಂಡ್‌ನಲ್ಲಿ ಕೂತಿದ್ದಾರೆ, ನೀನು ಬೇಗ ಬಾಮ್ಮ ಎಂದು ವಸಂತಿಯನ್ನು ಎಳೆದಾಡಿದ, ಅಯ್ಯೋ! ಈಗೇನು ಮಾಡಲಿ? ಇದೆಂತಹ ಗ್ರಹಚಾರ ಎಂದುಕೊಳ್ಳುತ್ತಾ ಚಪ್ಪಲಿ ಮೆಟ್ಟಿನಿಂತ ವಸಂತಿಯನ್ನು ನೋಡಿ ನನಗೆ ಕರುಳು ಚುರ್ ಎಂದಿತು. ಅಯ್ಯೋ! ಪಾಪ, ಮನದ ನೋವನ್ನು ತೋಡಿಕೊಳ್ಳಲು ಗೆಳತಿ ಇಲ್ಲಿಗೆ ಬಂದಳು, ಇನ್ನೇನು ಅನಾಹುತವಾಗಿ ಅವಳ ಗಂಡನಿಂದ ಬೈಗಳ ಕೇಳಬೇಕಾಗುತ್ತೋ ಎನ್ನುತ್ತ ನಾನು ಅವಳನ್ನ ರಸ್ತೆಯವರೆಗೂ ಬಿಟ್ಟು ಬಂದೆ, ಆಮೇಲೆ ನೆನಪಾಯ್ತು, ಹಾಳಾದ್ದು, ನನ್ನ ಮರವಿಗಿಷ್ಟು, ಮನೆಯಲ್ಲಿ ಕಾರು ಇದ್ದು, ಗೆಳತಿಗೆ ಆಟೋನೂ ಸಿಗದೆ ನಡೆದೆ ಓಡಿದ್ದು ನೆನೆದು ಮರುಕವಾಯ್ತು.

ಮತ್ತೆ ಒಂದು ಗಂಟೆಯ ನಂತರ ಗೆಳತಿ ವಸಂತಿಗೆ ಕರೆ ಮಾಡಿದೆ. ನಮ್ಮನೆಯಿಂದ ಹೊರಟಮೇಲೆ ಏನಾಯ್ತು? ನಿಮ್ಮ ಅತ್ತೆ ಹೇಗಿದ್ದಾರೆ ಎಂದು.

ಅಯ್ಯೋ! ಅದೊಂದು ದೊಡ್ಡ ಕತೆ ನನ್ನ ಪುಣ್ಯ ಚೆನ್ನಾಗಿತ್ತು, ಬಸ್ ಸ್ಟಾಂಡಿನಲ್ಲೆ ಕೂತಿದ್ದರು. ಸದ್ಯ ಇಲ್ಲಿಂದಾ ಬೇಲೂರಿಗೆ ಇರುವುದೊಂದೇ ಬಸ್ಸು, ಅದೂ ಬೆಳಿಗ್ಗೆ 7 ಗಂಟೆಗೆ, ಆದ್ದರಿಂದ ಹೋಗೋ, ಬರೋ ಬಸ್ಸಿನ ಬೋರ್ಡನ್ನು ಅವರೇ ಓದಿ, ಓದಿ, ಇನ್ನು ಬಸ್ ಬಂದಿಲ್ಲಾಂತ ಅಲ್ಲೆ ಕೂತಿದ್ದರು. ನಾನು ನನ್ನ ಮಗ ಉಪಾಯ ಮಾಡಿದೆವು. ಅಜ್ಜ ಮನೆಗೆ ಬಂದು ಕೂತಿದ್ದಾರೆ ಎನ್ನಿ ಎಂದ ಮಗ, ಆಗ ಅವರೇನು ಹೇಳಿದ್ರು ಗೊತ್ತಾ?

ಹೂಂ ಬೇಗ ಹೇಳು ನನಗೂ ವಯಸ್ಸಾಯ್ತು ಇನ್ನು ನಾಲ್ಕು ಸಂವತ್ಸರ ಕಳೆದರೆ ನಾನೂ ಅರಳು ಮರಳಿನ ಲೈನ್‌ಗೆ ಸೇರಿಬಿಡ್ತೀನಿ ಎಂದೆ!

ಸಾಕು ಸುಮ್ಮನಿರೇ ಎಂದವಳೇ ಮತ್ತೆ ಆ 'ಮಾಯಾವಿ ಮರಗುಳಿ' ಏನೆಲ್ಲಾ ಮಾಡುತ್ತೇಂತಾ ಪ್ರಾರಂಭಿಸಿದಳು ಗೆಳತಿ, ಅಯ್ಯ! ಮುಚ್ಚುಮುಂಡೆದೆ, ನಿಮ್ಮ ಅಜ್ಜ ಚೆನ್ನಕೇಶವನ ಪಾದ ಸೇರಿ ಆಗಲೇ 15 ವರ್ಷವಾಯ್ತು. ಅವರ್ಹೇಗ ಮನೆಗೆ ಬರ್ತಾರೊ? ಹೂಂ ನಡಿ, ಈ ಹಾಳಾದ್ದು ಬಸ್ಸು ಬರಲೇ ಇಲ್ಲಾಂತ ಕೈಲಿದ್ದ ಚೀಲವನ್ನ ಹಿಡಿದು ನಮ್ಮ ಜೊತೆ ಮನೆಗೆ ಬಂದರು ಅಂತಾ ಗೆಳತಿ ಹೇಳುತ್ತಿರುವಾಗಲೇ ನನ್ನ ಮೂಗಿಗೆ ಕರುಕು ವಾಸನೆ ಬರಲಾರಂಭಿಸಿತು, ಅಯ್ಯೊ! ವಸಂತಿ ನಾನು ಒಲೆ ಮೇಲೆ ಹಾಲಿಟ್ಟಿದ್ದೆ ಅದೆಲ್ಲಾ ಇಂಗಿ, ಇಂಗಿ, ಕರಕಾಗಿದೇಂತ ಅನ್ಸುತ್ತೆ. ಫೋನ್ ಇಟ್ಟುಬಿಡ್ತೀನಿ ಸಾರಿ, ನಾಳೆ ಮತ್ತೆ ಮಾತಾಡೋಣ, ನೀನು ಬೇಜಾರಾಗಬೇಡಾ, ಸಾವಿತ್ರಮ್ಮ ಹೇಳಿದ ಹಾಗೆ, ಯಾವ ಗಳಿಗೇಲಿ ಆ ಮರಗುಳಿ ಮಾಯಾವಿ ಮುಸುಕು ಹಾಕಿಬಿಡುತ್ತೊ ಅಂತಾ ಹೇಳಿ ಫೋನನ್ನ ಕುಕ್ಕಿ ಅಡುಗೆ ಮನೆಗೆ ಧಾವಿಸಿದೆ, ಮನೆತುಂಬಾ ಮುಸುಕಿದ್ದ ಆ ಕರುಟನ್ನ ಹೋಗಲಾಡಿಸಲು ಇದ್ದಬದ್ದ ಕಿಟಕಿ ಬಾಗಿಲನ್ನ ತೆಗೆಯಲು ಮುಂದಾದೆ.



ನನ್ನ ಮಗಳಿಗೆ ಯಾವಾನಾದ್ರು ವರದಕ್ಷಿಣೆ ಕೇಳ್ಲಿ... ಅವನ್ನ ಕೊಚ್ಚಿ... ಕೊಚ್ಚಿ...
ಕೈಮಾ ಮಾಡಿ... ಚಿಕನ್ ಬಿರಿಯಾನಿಯಲ್ಲಿ ಮಿಕ್ಸ್ ಮಾಡಿಬಿಡ್ತೀನಿ... ತಿಳ್ಕ

ನನ್ನ ನಿಮ್ಮ ನಡುವೆ...

– ಗೌತಮ

ಹಾದಿಯ ಬದಿಯಲ್ಲಿನ ಕಸದ ತೊಟ್ಟಿಯ ಮುಚ್ಚಳವನ್ನು ನಾನು ಮೆಲ್ಲಗೆ ತೆರೆದು ಹೊರಗೆ ಇಣುಕಿದೆ.

ಒಳ್ಳೆ ಥ್ರಿಲ್ಲನ್ನೇ ಬಿಡೋಕೆ ಷುರು ಮಾಡಿದಿರಲ್ರೀ.

ಇಲ್ಲ ಸ್ವಾಮೀ, ಇದು ಥ್ರಿಲ್ಲಲ್ಲ. ನನ್ನ ಸ್ವಂತ ಜೀವನದಲ್ಲಿ ಸ್ವಂತವಾಗಿ ಅನುಭವಿಸಿದ ನೈಜವಾದ ಘಟನೆ ಸ್ವಾಮೀ.

ಸರೀ, ಇದೇನು ಇಂಡಿಯಾದಲ್ಲಿ ನಡೆದ ನೈಜ ಘಟನೆಯೋ ಇಲ್ಲಾ, ಇನ್ಯಾವುದಾದರೂ ಬೇರೇ....?

ಇಲ್ಲ ಸ್ವಾಮೀ ಇಲ್ಲ, ಇಂಡಿಯಾದಲ್ಲಿಯೇ, ಅದು ನಮ್ಮ ಬ್ಯಾಡರ ಹಳ್ಳಿಯಲ್ಲೇ ನಡೆದದ್ದು.

ಏನೂ?! ಇಂಡಿಯಾದಲ್ಲಿ, ಅದೂ ಬ್ಯಾಡರ ಹಳ್ಳೀಲಿ ನಡೆದದ್ದಾ? ನಂಬೋಕಾಗೋಲ್ಲ ಬಿಡಿ.

ಯಾಕೇ? ನಂಬೋಕಾಗದೇ ಇರೋಂಥದ್ದು ಏನಿದೆ ಇದರಲ್ಲಿ?

ಅಲ್ರೀ, ಬ್ಯಾಡರ ಹಳ್ಳಿಯಂಥ ಹಳ್ಳಿಯ ಹಾದಿ ಬದಿಯಲ್ಲಿ ಕಸದ ತೊಟ್ಟಿ ಇರೋದು ಅಂದ್ರೇನೂ, ಇದ್ದರೂ ಅದಕ್ಕೆ ಮುಚ್ಚಳ ಬೇರೆ ಇರತ್ತೆ ಅಂದ್ರೇನೂ, ನಂಬೋ ವಿಷಯವೇನ್ರೀ?

ಸ್ವಾಮೀ ನೀವು ಯಾವುದೋ ಕಾಲದಲ್ಲಿದ್ದೀರಿ ಅಂತ ಕಾಣತ್ತೆ. ಸಾವಿರಾರು ಕೋಟಿ ವಿದೇಶಿ ಸಾಲ ತೊಗೊಂಡು ಬೆಂಗಳೂರಿನ ಎಲ್ಲ ರಸ್ತೆಗಳನ್ನೂ ಕರೀನ ಕಪೂರ್ ಕೆನ್ನೆ ಥರ ಮಾಡಿದ್ದಾರೆ. ಅದರ ಮೇಲೆ ನಡೆಯೋದೇ ಒಂದು ಮಜಾ ಕಣ್ರೀ. ನೋಡಿ, ನೀವು ಹೀಗೆ ಮಧ್ಯೆ ಮಧ್ಯೆ ಪ್ರಶ್ನೆ ಕೇಳ್ತಾ ಇದ್ದರೆ ನನ್ನ ಕೈಲಿ ಮುಂದುವರೆಸೋಕೆ ಆಗೋಲ್ಲ ಸ್ವಾಮಿ.

ಆಯ್ತು ಹೇಳಿ. ಮಧ್ಯೆ ಬಾಯಿ ಹಾಕೋಲ್ಲ.

ನನಗೆ ಅಂಥ ಸ್ಥಿತಿ ಬರಬಾರದಿತ್ತು. ಆದರೆ ಬಂತು. ಏನು ಮಾಡೋಕಾಗತ್ತೆ. ಅಂಥ 'ಸೆಲ್ವೀ'ನೇ ಜೇಲಿನಲ್ಲಿ ಸಿಲಾವರು ತಟ್ಟೇಲಿ ತಿನ್ನಬೇಕಾಯ್ತು. ಅಣ್ಣಾವ್ರರಂಥವರೇ ಪಾಪ, ಕಾಡಿನಲ್ಲಿ ಕೂತು ಅಲ್ಯೂಮಿನಿಯಂ ತಟ್ಟೇಲಿ ಉಣ್ಣಬೇಕಾಯ್ತು. ಸತ್ಯ ಹರಿಶ್ಚಂದ್ರನಂಥವರೇ ಸ್ಮಶಾನವನ್ನು ಕಾಯಬೇಕಾಯಿತು. ಇನ್ನು ನನ್ನಂಥವರ ಪಾಡೇನು ಬಿಡಿ. ನಾನು ಇಲ್ಲಿಗೆ ಹೇಗೆ ಬಂದೆ ಅನ್ನೋದನ್ನ ಆಮೇಲೆ ಹೇಳ್ತೀನಿ. ಮುಚ್ಚಳಾನ ಮೆಲ್ಲನೆ ತೆರೆದು ಹೊರಗೆ ಇಣುಕಿ ಆ ಕಡೆ ಈ ಕಡೆ ನೋಡಿದೆನಾ? ಒಂದು ನರ ಪಿಳ್ಳೆಯ ಸುಳಿವೂ ಇಲ್ಲ. ಪೂರ್ತಿ ಮುಚ್ಚಳ ತೆಗೆದು ಹೊರಗೆ ಹಾರಿಬಿಡೋಣ ಅಂದುಕೊಳ್ತಾ ಇರೋ ಹಾಗೇನೇ ದೂರದ ತಿರುವಿನಲ್ಲಿ ಯಾರೋ ಓಡಿ ಬರುತ್ತಿರುವುದು ಕಾಣಿಸಿತು. ಆಗಾಗ

ಒಂದೆ ತಿರುಗಿ ನೋಡುತ್ತ, ಜೀವವನ್ನು ಅಂಗೈಲಿ ಹಿಡಿದುಕೊಂಡು ಓಡೋಡಿ ಬರುತ್ತಿದ್ದುದನ್ನ ನೋಡಿದರೆ, ಯಾರೋ ಅಟ್ಟಿಸಿಕೊಂಡು ಬರ್ತಿದ್ದಾರೆ ಅನ್ನೋದರಲ್ಲಿ ಅನುಮಾನಾನೇ ಉಳೀಲಿಲ್ಲ. ಆ ತಕ್ಷಣ ಸಿಕ್ಸ್ತ್ ಸೆನ್ಸ್ ಹೇಳಿತು 'ಮುಚ್ಚಳಾನ್ನ ಪೂರ್ತಿ ತೆಗಿ' ಅಂತ. ನನಗೆ ಎಂಥ ಅಪಾಯ ಬಂದೊದಗಬಹುದು ಅನ್ನೋ ಯೋಚನೆಯನ್ನೂ ಮಾಡದೆ ಮುಚ್ಚಳವನ್ನ ಪೂರ್ತಿ ತೆಗೆದೆ. ಮುಚ್ಚಳ ತೆರೆದದ್ದನ್ನ ಕಂಡ ತಕ್ಷಣ ಸುಮಾರು ಹದಿನಾರಡಿ ದೂರದಿಂದ ಒಂದೇ ನೆಗೆತಕ್ಕೆ ಹಾರಿ ತೊಟ್ಟಿಯೊಳಕ್ಕೆ ಹಾರಿದ್ದಕ್ಕೆ ನನಗೂ ಕೊಂಚ ಪೆಟ್ಟಾಯ್ತು. ಹಾಗೆ ಒಳಗೆ ಸೇರಿದ್ದಕ್ಕೂ, ಮರುಕ್ಷಣದಲ್ಲಿ ಅಟ್ಟಿಸಿಕೊಂಡು ಬರುತ್ತಿದ್ದ ಪಟಾಲಂ ನನಗೆ ಕಣ್ಣಿಗೆ ಬಿದ್ದದ್ದಕ್ಕೂ ಸರಿಹೋಯಿತು. ಪಟಕ್ ಅಂತ ಮುಚ್ಚಳವನ್ನ ಪೂರ್ತಿ ಮುಚ್ಚಿಕೊಂಡೆ. ಜೋರಾಗಿ ಉಸಿರಾಡುತ್ತಿದ್ದುದು ಎಲ್ಲಿ ಅಟ್ಟಿಸಿಕೊಂಡು ಬರುವವರಿಗೆ ಕೇಳಿಸಿಬಿಡುತ್ತೋ ಅಂತ ಬಾಯಿ ಮೇಲೆ ಕೈ ಇಟ್ಟು ಮೆಲ್ಲನೆ ಉಸಿರಾಡಲು ಸೂಚಿಸಿದೆ. ಪಟಾಲಂನ ಸದ್ದಡಗಿದ ಮೇಲೆ ಪಕ್ಕಕ್ಕೆ ತಿರುಗಿ ನೋಡಿದೆ. ಅದೊಂದು ಹೆಣ್ಣು. ಕೇಳಿದೆ 'ಏನು ನಿನ್ನ ಕಥೆ' ಅಂತ. ಆ ಕಥೇನ ಬ್ರೀಫಾಗಿ ಹೇಳ್ತೀನಿ. ಇವಳನ್ನು ಒಬ್ಬ ಬಲವಂತವಾಗಿ ಲೌ ಮಾಡ್ತಿದ್ದನಂತೆ. ಇವಳಿಗೆ ಅದು ಇಷ್ಟ ಇರಲಿಲ್ಲವಂತೆ. 'ಲೌ ಮಾಡಲೇಬೇಕು, ಇಲ್ಲಾಂದ್ರೆ ಆಸಿಡ್ ಹಾಕ್ತೀನಿ' ಅಂದದ್ದಕ್ಕೆ ಹೆದರಿ ಇವಳು ಓಡಿ ಬರ್ತಿದ್ದಳಂತೆ. ಆಶ್ರಯ ಕೊಟ್ಟದ್ದಕ್ಕೆ ನನಗೆ ಕಣ್ಣಲ್ಲೇ ಥ್ಯಾಂಕ್ಸ್ ಹೇಳಿದಾಗ 'ಧನ್ಯನಾದೆ' ಎಂದುಕೊಂಡೆ. ನನ್ನ ಕಥೇನೂ ಹೇಳಿದೆ. ನಿಮಗಾಗಿ ಇನ್ನೊಂದು ಸಲ ಹೇಳ್ತೀನಿ. ನಂದೂ ಅದೇ ಕಥೇನೇ. ಸೇಮ್. ಡಿಟ್ಟೋ. ನಾನು ಒಂದು ಹೆಣ್ಣನ್ನ ಪ್ರೀತಿಸಿದೆ. ಆದರೆ ಅವಳು ಅದ್ಯಾಕೋ ನನ್ನನ್ನು ಪ್ರೀತಿಸಲಿಲ್ಲ. 'ಪ್ರೀತ್ಸೇ' ಅಂತ ಜೋರು ಮಾಡಿದೆ. ಒಪ್ಪಲಿಲ್ಲ. ಕಡೆಗೂ ಒಪ್ಪಿಗೆ ಸಿಕ್ಕಿತು, 'ಆಸಿಡ್ ಎರಚ್ತೀನಿ' ಅಂತ ಹೇಳಿದ ಮೇಲೆ. ಒಪ್ಪಿಗೆ ಸಿಕ್ಕಿದ್ದಕ್ಕೆ ಖುಷಿ ಆಯ್ತು. ಸಧ್ಯದಲ್ಲೇ ಮದುವೆ ಆಗೋ ಏರ್ಪಾಡು ಮಾಡ್ತಾ ಇದ್ದೆ. ಅಷ್ಟರಲ್ಲಿ ಇವತ್ತು ಆ ಹೆಣ್ಣಿನ ಕಡೆಯವರ ಗ್ಯಾಂಗು ನನ್ನನ್ನ ಕೊಚ್ಚಿಹಾಕಿಬಿಡಬೇಕೂಂತ ಇದ್ದಕ್ಕಿದ್ದ ಹಾಗೆ ನನ್ನ ಹಿಂದೆ ಬಿತ್ತು. ಕೆಟ್ಟೆನೋ ಸತ್ತೆನೋ ಅಂತ ದೌಡಾಯಿಸಿದೆ. ಆದೇ ತಿರುವಿನಲ್ಲಿ ತಿರುಗಿದೆ. ನನ್ನ ಪುಣ್ಯ. ಓಪನ್ ಆಗಿದ್ದ ಆ ತೊಟ್ಟಿಯು ಕಾಣಿಸಿತು. ಇಪ್ಪತ್ತು ಅಡಿ ದೂರದಿಂದ ಒಂದೇ ಜಂಪ್ ಮಾಡಿದೆ ನೋಡೀ. ಇದರಲ್ಲಿ ಬಂದು ಬಿದ್ದೆ. ಥಟ್ ಅಂತ ಬಾಗಿಲು ಹಾಕ್ಕೊಂಡೆ. ಅಟ್ಟಿಸಿಕೊಂಡು ಬಂದೋರಿಗೆ ನಾನು ಕಾಣಿಸಲಿಲ್ಲ. 'ತಪ್ಪಿಸಿಕೊಂಡು ಬಿಟ್ಟ ನನ್ಮಗ. ಎಲ್ಲಿ ಹೋಗ್ತಾನೆ ಇವತ್ತಲ್ಲ ನಾಳೆ ಸಿಕ್ಕೇ ಸಿಕ್ತಾನೆ' ಅಂತ ಗೊಣಗಿಕೊಂಡು ತೆಪ್ಪಗೆ ಹೋದದ್ದು ಕೇಳಿಸಿತು. ಇಬ್ಬರೂ ಕಥೆಗಳನ್ನು ಹೇಳಿಕೊಂಡ ಮೇಲೆ 'ಬರ್ಡ್ಸ್ ಆಫ್ ದ ಸೇಮ್ ಫೆದರ್' ಅನ್ನೋಮ ಇಬ್ಬರಿಗೂ ಮನದಟ್ಟಾಯಿತು. ಅಲ್ಲೇ ಪ್ರೀತಿ ಹುಟ್ಟಿತು. ಪ್ರೇಮವಾಗಿ ಬೆಳೆಯಿತು. ಇಬ್ಬರೂ ಮೌನಿಗಳಾದೆವು. ನಮ್ಮಿಬ್ಬರ ಮನದಾಳದ ಮಾತುಗಳಷ್ಟೇ ನಮಗೆ ಕೇಳಿಸುತ್ತಿದ್ದುದು. ಪ್ರೇಮವು ಗಾಢವಾದ ಪ್ರಣಯಕ್ಕೆ ತಿರುಗುವ ಮುನ್ನ ಎಚ್ಚೆತ್ತೆವು. ಹಾದಿಯ ಬದಿಯಲ್ಲಿನ ಕಸದ ತೊಟ್ಟಿಯ ಮುಚ್ಚಳವನ್ನು ನಾನು ಮೆಲ್ಲಗೆ ತೆರೆದು ಹೊರಗೆ ಇಣುಕಿದೆ. ಒಂದು ನರಪಿಳ್ಳೆಯ ಸುಳಿವೂ ಇಲ್ಲ. ಪೂರ್ತಿ ಮುಚ್ಚಳ ತೆಗೆದು ಇಬ್ಬರೂ ಹೊರಗೆ ಹಾರಿದೆವು.

ಕಥೆ ಏನೋ ಚೆನ್ನಾಗಿದೆ ಅಂದ ಹಾಗೆ, ನಿಮ್ಮ ಹೆಸರನ್ನೇ ಹೇಳ್ಳಿಲ್ಲವಲ್ಲ.

ನನ್ನ ಹೆಸರು ಟೈಗರ್, ಇವಳ ಹೆಸರು ಸ್ವೀಟೀ.

'ನಮಸ್ಕಾರ ಸಾರ್' - ಭಾಗ 2

- ವಿ. ಪ್ರಾಣೇಶ್‌ರಾವ್

ತಮ್ಮಯ್ಯ ನನ್ನ ಸನ್ಮಿತ್ರ ಹಾಗೂ ಪತ್ರಿಕಾ ಸಂಪಾದಕನಾದುದರಿಂದ ಆಗಾಗ್ಗೆ ಭೇಟಿಯಾಗುತ್ತಿರುತ್ತೇವೆ. ಆದರೆ ಇತ್ತೀಚೆಗೆ ಅವನನ್ನು ಭೇಟಿಯಾಗಲಿಲ್ಲ. ಮೊನ್ನೆ ಇದ್ದಕ್ಕಿದ್ದ ಹಾಗೆ ಅವನನ್ನು ಕಾಣಬೇಕೆನಿಸಿ ಅವನ ಕಛೇರಿಯಲ್ಲಿ ಕಾದಿರಿಸಿದೆ. ಒಳಕ್ಕೆ ಹೋಗುತ್ತಿದ್ದಂತೆ ''ನಮಸ್ಕಾರ ಸಾರ್'' ಎಂದೆ. ಯಾವುದೊ ಬರಹವನ್ನು ಪರಿಶೀಲಿಸುತ್ತಿದ್ದ ಸಂಪಾದಕ ಮಹಾಶಯರು ಸರಕ್ಕನೆ ತಲೆಯೆತ್ತಿ ನೋಡಿ ''ಓ ನೀನಾ! - ಇಟೀಸ್ ಏಜಸ್ ಸಿನ್ಸ್ ಐ ಮೆಟ್‌ಯು' ಎಂಬ ಭಾವವನ್ನು ಚೆಲ್ಲುವ ನೋಟವನ್ನು ಹರಿಸಿ - ಬಾ ಕುಳಿತುಕೊ. ಯಾವ ರಾಯನ ಕಾಲವಾಯಿತು ನಿನ್ನ ನೋಡಿ...'' ಎನ್ನುತ್ತ ಬೆಲ್ ಬಾರಿಸಿ ಕಾಫಿಗೆ ಹೇಳಿದ.

''ಒಮ್ಮೆ 'ನಮಸ್ಕಾರ'ದ ಅನುಭವಗಳನ್ನು ನಿನಗೆ ಹೇಳಿದ್ದೆ, ಜ್ಞಾಪಕವಿದೆಯಾ? - ಕೇಳಿದೆ. ''ಹೌದು. ಅದನ್ನೆಲ್ಲ ಬರೆದು ಕಳಿಸಬೇಡ. ನಾನು ಪ್ರಕಟಿಸೋಲ್ಲ ಎಂದಿದ್ದೆ. ನಂತರ ಅದು 'ಸುಧಾ'ದಲ್ಲಿ ಬಂತಲ್ಲ'' ಎಂದ. ಮುಂದುವರಿಸಿ ''ಅದಾದ ನಂತರ ಮತ್ತಷ್ಟು ಅನುಭವಗಳಾಗಿವೆ ಅಂತ ಈಗ ಕೊರೆಯಲು ಬಂದಿರುವೆ ತಾನೆ'' ಎಂದು ಸೇರಿಸಿದ. ''ಹೌದು ಎಷ್ಟು ಸರಿಯಾಗಿ ಹೇಳಿದೆಯಲ್ಲ, ನೀನು ಕಾಫಿಗೆ ಹೇಳಿದಾಗಲೆ ನನಗೆ ಅನುಮಾನ ಬಂತು - ನಾನು ನಿನಗೆ ತಲೆನೋವಿನ ಕೇಸು ಅಂತ'' ಅಂದೆ. ''ಏ ಹಾಗೇನಿಲ್ಲ. ಹೇಳು ನಿನ್ನ 'ನಮಸ್ಕಾರ ಸಾರ್ - ಭಾಗ 2' ರ ಅನುಭವಗಳನ್ನು...'' ಎಂದು ಅಪ್ಪಣೆಯನ್ನಿತ್ತ.

''ನೋಡು ತಮ್ಮು. ನಿನ್ನ ಹತ್ತಿರ ಮುಚ್ಚುಮರೆ ಏನು? ನಾನು ಕಾಲೇಜಿನಿಂದ ರಿಟೈರ್ ಆದ ಮೇಲೆ 'ನಮಸ್ಕಾರ ಸಾರ್' ಎಂದು ವಿಶ್ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯೇ ಕಡಿಮೆಯಾಗಿದೆ! ಅಷ್ಟೇ ಏಕೆ. ಅವರ ಪೇರೆಂಟ್ಸೂ ಕೆಲವರು ನಮಸ್ಕಾರ ಹೇಳುತ್ತಿದ್ದರು. ಅದೂ ಬಹಳಷ್ಟು ಕಡಿಮೆಯಾಗಿದೆ!...''

''ನಿನ್ನ ಗೋಳು ಕೇಳುತ್ತಿದ್ದರೆ ಒಂದು ಕತೆ ನೆನಪಿಗೆ ಬರುತ್ತದೆ. ಒಬ್ಬ ಇನ್‌ಸ್ಪೆಕ್ಟರ್ ಇದ್ದನಂತೆ. ಅವನು ಸರ್ವಿಸ್‌ನಲ್ಲಿದ್ದಾಗ ಅವನ ಜೀಪು ಅಥವಾ ಕಾರು ಪೇಟೆ ಸರ್ಕಲ್‌ಗೆ ಬಂದೊಡನೆ ಸಂಚಾರಿ ಪೋಲೀಸ್ ಪೇದೆ ಸೆಟೆದು ನಿಂತು ಸೆಲ್ಯೂಟ್ ಹೊಡೆಯುತ್ತಿದ್ದನಂತೆ, ಹೀಗೇ ಇರಲು ಒಂದು ದಿನ ಇನ್‌ಸ್ಪೆಕ್ಟರ್ ರಿಟೈರ್ ಆಗಬೇಕಾಯಿತು. ರಿಟೈರ್ ಆದ ಮೇಲೆ ಕೆಲವು ದಿನ ಸೆಲ್ಯೂಟ್ ಸೇವೆ ಮುಂದುವರಿಯಿತಾದರೂ ಕ್ರಮೇಣ ಕಡಿಮೆಯಾಗಿ ಕೊನೆಗೊಂದು ದಿನ ನಿಂತೇ ಹೋಯಿತೊ ಅಥವಾ ಆ ಪೇದೆ ಬೇರೆ ಕಡೆಗೆ ವರ್ಗವಾಗಿ ಹೋದನೊ ಗೊತ್ತಾಗಲಿಲ್ಲ. ರಿಟೈರ್ ಆದಮೇಲೆ ಸಿಕ್ಕುವ ಮರ್ಯಾದೆ ಅಷ್ಟಕ್ಕಷ್ಟೇ ಅಂತ ನಿನಗೆ ಗೊತ್ತೇ ಇದೆಯಲ್ಲ,

ಆದರೆ ಅವನೊಂದು ಉಪಾಯ ಮಾಡಿದ. ಅದೆಂದರೆ ಸರ್ಕಲ್‌ನಲ್ಲಿ ಇವನ ಕಾರು ಬಂದೊಡನೆ ಅಲ್ಲಿರುವ ಸಂಚಾರಿ ಪೋಲಿಸ್ ಪೇದೆ ಸೆಟೆದು ನಿಂತು ಸೆಲ್ಯೂಟ್ ಹೊಡೆಯಬೇಕು, ಕಾರಿನ ಕಿಟಕಿಯ ಮೂಲಕ ಮಾಮೂಲು ಸಂದಾಯವಾಗಬೇಕು. ಹೇಗಿದೆ ಸೆಲ್ಯೂಟ್ ಸಮಾಚಾರ!'' ಎಂದು ಅವನು ನಗತೊಡಗಿದ. ನಾನು ನಗಲಿಲ್ಲ.

ಪೆಚ್ಚಾದ ನನ್ನ ಮುಖ ನೋಡುತ್ತ ಅವನು ಮುಂದುವರಿಸಿದ. ''ನಾವು ವಾಡ್ಲಾ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ದೇವ ಶಿಖಾಮಣಿ ಅಂತ ಇಂಗ್ಲಿಷ್ ಮೇಷ್ಟ್ರೊಬ್ಬರಿದ್ದರು ಜ್ಞಾಪಕವಿದೆಯಾ...?'' ''ಹ್ಞೂಂ ಇದೆಯಪ್ಪ, ಏನೀಗ?'' ''ಏನೂ ಇಲ್ಲ, ವಿದ್ಯಾರ್ಥಿಗಳಿಗೆ ಅವರು ಹೇಳುತ್ತಿದ್ದರು, ನಾವು ಎಲ್ಲಿಯೇ ಕಾಣಲಿ 'ನಮಸ್ಕಾರ ಸಾರ್' ಎಂದು ಹೇಳುತ್ತೀರಲ್ಲ. ನಾವು ನಿಮ್ಮ ನಮಸ್ಕಾರಗಳನ್ನೆಲ್ಲ ಚೀಲದಲ್ಲಿ ಹಾಕಿಕೊಂಡು ಹೋಗಿ ಅನ್ನಸಾರು ತರಕಾರಿ ಅಂತ ಮಾಡೋಕೆ ಬರುತ್ತೇನ್ರಯ್ಯ... ಎನ್ನುತ್ತಿರಲಿಲ್ಲವೇ'' ಎನ್ನುತ್ತ ನಗತೊಡಗಿದ ತಮ್ಮಯ್ಯ.

''ಹೌದು. ಅಲ್ಲಿ ಡ್ಯಾನಿಯಲ್ ಅಂತ ಇನ್ನೊಬ್ಬ ಮೇಷ್ಟ್ರಿದ್ದರಲ್ಲ. ನೆನಪಿದೆಯೊ ನಿನಗೆ? ಅದೇ ಫ್ರೆಂಚ್‌ಕಟ್ ಮೀಸೆ. ಕಚ್ಚೆ ಪಂಚೆ, ಕೋಟು, ಕೊಡೆ, ಆರ್. ಮೂರ್ತಿಯವರ ಪ್ರಸಿದ್ಧ ವ್ಯಂಗ್ಯಚಿತ್ರ 'ಮಿಸ್ಟರ್ ಸಿಟಿಜನ್' ತರ ಇರ್ತಿದ್ರಲ್ಲ. ಆಗಿನ್ನೂ 'ಮಿಸ್ಟರ್ ಸಿಟಿಜನ್'ನ ಸೃಷ್ಟಿಯಾಗಿರಲಿಲ್ಲ. ಬಿಡು ಎಂದು ಮಾತು ಸೇರಿಸಿ ನಾನು ಕೇಳಿದೆ. 'ಹ್ಞಾ, ಅದೇ ಅವರನ್ನು ನಾವು 'ಕಡಾಣೀಲ್' ಅಂತ ಕರೀತಿದ್ದೆವಲ್ಲ ಅವರೇ ತಾನೇ?!'' ಅವನು ಪ್ರತಿಕ್ರಿಯಿಸಿದ. ''ಖಂಡಿತವಾಗಿಯೂ ಅವರೇ. ಪ್ರಭಾತ್ ಟಾಕೀಸ್ ಪಕ್ಕದಲ್ಲಿರೊ ಹೋಟಲ್ಲಿ ಒನ್ ಬೈಟೂ ಕಾಫಿ ಇಂಟ್ರೊಡ್ಯೂಸ್ ಮಾಡಿದ್ದು ತಾವೇ ಅಂತ ಹೇಳಿಕೊಳ್ಳುತ್ತಿದ್ದರಲ್ಲ. ಅವರು ನಾವು ಸೈಕಲ್ ಮೇಲೆ ಹೋಗುವಾಗ ವಿಶ್ ಮಾಡಿದರೆ ರೆಸಿಪ್ರೊಕೇಟ್ ಮಾಡುತ್ತ, ''ಲೋ ಅವನು ಹಿಂದೆ ಕುಳಿತಿದ್ದಾನಲ್ಲ. ಅವನು ಯಾರು? ವಿಶ್ ಮಾಡಲೇ ಇಲ್ಲವಲ್ಲ....'' ಎನ್ನುತ್ತಿದ್ದರು. ಹಿಂದೆ ಕುಳಿತಿದ್ದವನು ಕೆಳಕ್ಕೆ ಹಾರಿ ''ಗುಡ್ ಮಾರ್ನಿಂಗ್ ಸರ್'' ಎಂದ ಮೇಲೆ ''ಏಕಯ್ಯ ಕಣ್ಣು ಕಾಣೋದಿಲ್ವೇನಯ್ಯ. ನಾನು ಇಲ್ಲಿ ಸೈಕಲ್ ಮೇಲೆ ಹೋಗುತ್ತಿದ್ದೇನೆ. ವಿಶ್ ಮಾಡಬೇಕು ಅನ್ನೊ ಪ್ರಜ್ಞೆ ಬೇಡ್ವಾ...'' ಎಂದು ಗದರುತ್ತಿದ್ದರು. ನಂತರ ನಾವು ನಗುತ್ತ ಮುಂದೆ ಹೋಗುತ್ತಿದ್ದೆವು ಎಂದು ನಾನೂ ನಗತೊಡಗಿದೆ.

''ಮೊನ್ನೆ ಎಲೆಕ್ಷನ್ ಟೈಂನಲ್ಲಿ ನಿನಗೆ ಸಿಕ್ಕಾಪಟ್ಟೆ ನಮಸ್ಕಾರಗಳು ಸಿಕ್ಕಿರಬೇಕಲ್ಲ... ತಮ್ಮಯ್ಯ ವ್ಯಂಗ್ಯವಾಗಿ ಮಾತನಾಡಿದ. ''ನೊಸೊ ಅವರ ನಮಸ್ಕಾರಗಳಿಗೆ ಮಾತ್ರ ನಾನು ಆಸೆ ಪಡೋಲ್ಲ, ನಿಯತ್ತಿಲ್ಲದವರ ನಮಸ್ಕಾರ ಯಾವೋನಿಗಯ್ಯ ಬೇಕು...'' ವ್ಯಗ್ರನಾಗಿ ನುಡಿದೆ. ''ಆ ಒಂದು ತಿಂಗಳು ಹೊರಗೇ ಬರಲಿಲ್ಲ, ಹೊರಗೆ ಬಂದರೆ ಎಲ್ಲಿ ನಮಸ್ಕಾರ ಹೇಳಿಬಿಡುತ್ತಾರೊ ಎಂದು ಒಳಗೇ ಕುಳಿತುಬಿಟ್ಟಿದ್ದೆ'' ಎಂದು ಮಾತು ಸೇರಿಸಿದೆ.

''ಹೋಗಲಿ ಬಿಡು. ಕಾಫಿ ಕುಡಿ'' ಎಂದ.

ಕಾಫಿ ಕುಡಿಯುತ್ತ ''ಈಗೀಗ ನನಗೆ ಎಲ್ಲೆಲ್ಲೂ ಶರಣರೇ ಕಾಣುತ್ತಾರಲ್ಲ'' ಎಂದೆ. ಅವನಿಗೆ ಪರಮಾಶ್ಚರ್ಯವಾಯಿತು.

''ಶರಣರಾ! ಶಿವಶರಣರಾ!'' ಎಂದು ಮೂಗಿನ ಮೇಲೆ ಬೆರಳಿಟ್ಟು ''ಅದೂ ಈಗಿನ ಕಾಲದಲ್ಲಿ ಎಲ್ಲೆಲ್ಲೂ ಶಿವಶರಣರು ಕಾಣಲು ಹೇಗಯ್ಯ ಸಾಧ್ಯ! ಬೇಕಾದರೆ ಯಮದೂತರು ಎಲ್ಲೆಡೆ ಕಾಣಸಿಗುತ್ತಾರೆ'' ಎಂದು ಗಪಗಪಿಸಿದ. ''ನೀನು ರಿಟೈರ್ ಆದಮೇಲೆ ಬರೀ ಪುರಾಣಗಳನ್ನು ಓದುತ್ತಿರುವುದರಿಂದ ನಿನಗೆ ಹಾಗಾಗುತ್ತಿರಬಹುದು...'' ಎಂದು ಅನುಮಾನಿಸಿದ. ಅದರಲ್ಲೇನಯ್ಯ ಅನುಮಾನ. 'ಎನಗಿಂತ ಕಿರಿಯರಿಲ್ಲ' ಎಂದಿಲ್ಲವೇ ಶರಣರು. ಈಗೀಗ ಜನರಿಗೆ ಅದೇ ರೋಗ ಬಂದುಬಿಟ್ಟಿದೆಯೊ ಏನೋ ತಾವು ಕಿರಿಯರು ಎಂದು ತಿಳಿದುಕೊಳ್ಳುವುದಲ್ಲದೆ ಅದನ್ನು ತೋರಿಸಿಕೊಳ್ಳಲು ಎದುರಿಗಿದ್ದವರಿಗೆ ಕಾಲುಮುಟ್ಟಿ ನಮಸ್ಕಾರ ಮಾಡಿಬಿಡುತ್ತಾರೆ. ಈಗ ಎಲ್ಲ ವಯಸ್ಸಿನವರೂ ಕೂದಲಿಗೆ ಡೈ ಹಾಕುವುದರಿಂದ ಮುದುಕರ್‍ಯಾರೊ ತದುಕರ್‍ಯಾರೊ ಒಂದೂ ಗೊತ್ತಾಗುವುದಿಲ್ಲ.

''ಮೊನ್ನೆ ಹೀಗಾಯಿತು ನಮ್ಮ ದೂರದ ನೆಂಟರಾದ ಶಾಲಾ ಮಾಸ್ತರಿಣಿಯೊಬ್ಬರು ಹೀಗೇ ಹೋಗುವ ಮುನ್ನ ವಯಸ್ಸಿನಲ್ಲಿ ಬಹಳಷ್ಟು ಚಿಕ್ಕವನಾದ ನನ್ನ ಮಗನ ಕಾಲಿಗೆ ನಮಸ್ಕಾರ ಮಾಡಿಬಿಟ್ಟರು. ಪಾಪ ಹಾರಿ ಹಿಂದೆ ಸರಿದವನೇ. ರೀರೀ ಆಂಟಿ ಏನ್ರೀ ಮಾಡ್ತಿದ್ದೀರಿ. ನಾನು ನಿಮಗಿಂತ ಬಹಳ ಚಿಕ್ಕವನು. ನೀವು ಹೀಗೆ ಮಾಡೋದು ನಮಗೆ ಶ್ರೇಯಸ್ಸಲ್ಲ... ಬೇಕಾದರೆ ನಮ್ಮಪ್ಪನಿಗೆ ನಮಸ್ಕಾರ ಮಾಡಿ. ಅವರು ದೊಡ್ಡವರು'' ಎಂದ.


''ನಿಮ್ಮ ಶಾಲೆಯಲ್ಲಿ ನೀವು ಹೀಗೇ ಮಾಡುತ್ತೀರೇನು?!'' ಎಂದು ಕೇಳಿದೆ. ''ಛೇ ಛೇ ಎಲ್ಲಾದರೂ ಉಂಟೇ...'' ಎನ್ನುತ್ತ ನನ್ನ ಕಾಲಿಗೆ ನಮಸ್ಕರಿಸಿ ಹೊರಟರು.

''ನಿನಗೂ ಅಷ್ಟೇ ಬೇಕಾಗಿತ್ತು. ಕಾಲು ತುರಿಕೆಯಾಗಿರಬೇಕು'' ಎಂದು ತಮ್ಮಯ್ಯ ಛೇಡಿಸಿದ.

ಸ್ವಲ್ಪ ಹೊತ್ತು ಅಲ್ಲಿ ಮೌನ ಆವರಿಸಿತ್ತು. ಮಧ್ಯೆ ಮಧ್ಯೆ ಅವನ ಸ್ಟಾಫ್ ಅದೂ ಇದೂ ಅಂತ ಬಂದು ಹೋಗುವುದು ಮಾಡುತ್ತಿದ್ದರು. ಮಧ್ಯೆ ಇವನೂ ಒಂದೆರಡು ಸಲ ಆಚೆ ಎದ್ದು ಹೋಗಿದ್ದ. ಹಿಂತಿರುಗಿ ಬಂದವನೇ ಕುರ್ಚಿಯಲ್ಲಿ ಕೂರುತ್ತ ಮೇಜಿನ ಗಾಜಿನ ಮೇಲೆ ಬೆರಳು ಕುಣಿಸತೊಡಗಿದ. ಅವನು ಒಳ್ಳೆಯ ಖುಷಿಯ ಮೂಡಿನಲ್ಲಿದ್ದಂತಿತ್ತು. ''ಹ್ಞೂ... ನಿನ್ನ ಪ್ರಸಂಗಗಳು ಬಹಳ ಸ್ವಾರಸ್ಯಕರವಾಗಿವೆ. ಮುಂದುವರಿಸು ಬೇಕಾದರೆ ಇನ್ನೊಂದು ಕಾಫಿಗೆ ಹೇಳುತ್ತೇನೆ'' ಎನ್ನುತ್ತ ಬೆಲ್ ಬಾರಿಸತೊಡಗಿದ.

''ಕಾಫಿ ಬೇಡ. ನಮಸ್ಕಾರ ಗಿಟ್ಟಿಸಿಕೊಳ್ಳೋಕೆ ನನ್ನ ಇನ್ನೂ ಒಂದು ಉಪಾಯ ಹೀಗಿದೆ'' ಎಂದು ಮಾತು ಮುಂದುವರಿಸಿದೆ. ''ಹೇಳು ಹೇಳು'' ಎಂದು ತಮ್ಮು ಮೇಜಿನ ಮೇಲೆ ಬಾಗಿ ಕಿವಿ ಅಗಲಿಸಿದ. ನಾನು ಹೇಳತೊಡಗಿದೆ.

''ಸಂಡೇ ಮ್ಯಾಗಜೀನ್ ಆಗಲಿ ಅಥವಾ ಸುಧಾ ತರಂಗ ಆಗಲಿ ಕೊಳ್ಳೋದಕ್ಕೆ ಒಂದು ಪರ್ಟಿಕ್ಯುಲರ್ ಅಂಗಡಿಗೇ ಹೋಗುತ್ತೇನೆ. ''ನಮ್ಮ ಮನೆ ಹತ್ರಾನೆ ಸಿಕ್ಕುತ್ತಿತ್ತಲ್ಲ! ಇಷ್ಟು ದೂರ ಯಾಕೆ ಬರಬೇಕಿತ್ತು. ಸುಮ್ನೇ ಪೆಟ್ರೋಲ್ ದಂಡ...'' ಅಂತ ನನ್ನವಳು ಏನಾದರೂ ಹೇಳಿದರೆ ''ಏ ಅದೆಲ್ಲ ನಿಂಗೆ ಗೊತ್ತಾಗಲ್ಲ. ಸುಮ್ನೆ ಕೂತ್ಕೊ'' ಎಂತಲೊ ''ಒಳ್ಳೆ ರಸಬಾಳೆ ಸಿಕ್ಕೋದಾದ್ರೆ ಅಲ್ಲೇ'' ಎಂತಲೊ ಹೇಳುತ್ತ ಮೊಪೆಡ್ ಅಲ್ಲಿಗೇ ಓಡಿಸುತ್ತೇನೆ. ನನ್ನ ಕಂಡೊಡನೆ ಆ ಅಂಗಡಿಯವನು ''ಓ ನಮಸ್ಕಾರ ಸಾರ್! ನಮಸ್ಕಾರ ತಾಯಿ! ಮನೆಯಲ್ಲಿ ಎಲ್ಲರೂ ಸೌಖ್ಯವೊ. ಏನು ಕೊಡಲಿ ಹೇಳಿ. ನಿಮ್ಮ ಮ್ಯಾಗಜೀನ್ ಬಂದಿದೆ. ಲೊ ಸಾಹೇಬ್ರಿಗೆ ಸಂಡೇ ಟೈಮ್ಸ್ ಕೊಡೊ. ಒಳ್ಳೆ ರಸಬಾಳೆ ಬಂದಿದೆ, ಒಂದು ಡಜನ್ ಕೊಡಲೊ...'' ಎಂದು ಬಾಯಿ ತುಂಬ ಉಪಚರಿಸುತ್ತಾನೆ. ಮಧ್ಯೆ ಮಧ್ಯೆ ದೇಶಾವರಿ ನಗೆ ಬೀರುತ್ತಾನೆ. ಅವನ ನಮಸ್ಕಾರೋಚ್ಚಾರ ನನ್ನ ಕರ್ಣೇಂದ್ರಿಯಗಳಿಗೆ ಆನಂದೋತ್ಸಾಹವನ್ನು ತುಂಬುತ್ತದೆ. ನನ್ನವಳು ನಾನು ಆನಂದ ತುಂದಿಲನಾಗಿರುವುದನ್ನು ನೋಡಿ ಸಂತೋಷಪಡುತ್ತಾಳೆ, ಭಾನುವಾರದ ಬೆಳಗಿನ ಸಂತೋಷ ಎಂದುಕೊಳ್ಳುತ್ತಾಳೆ. ನನ್ನ ಸಂತೋಷದ ಮೂಲ ಕಾರಣ ನನ್ನ ನಮಸ್ಕಾರದ ಬಯಕೆ ತೀರಿದುದೇ ಆಗಿದೆ ಎಂಬುದು ಮಾತ್ರ ಅವಳಿಗೆ ಅರ್ಥವಾಗುವುದಿಲ್ಲ. ನಾನು ಕಾಲರ್ ಎತ್ತಿಕೊಂಡು ಜಂಬದಿಂದ ಮುಂದೆ ನಡೆಯುತ್ತೇನೆ. ಹೇಗಿದೆ ನನ್ನ ತಂತ್ರ...'' ಎಂದು ಹುಬ್ಬು ಹಾರಿಸಿದೆ. ''ಅದ್ಭುತವಾಗಿದೆ'' ಎಂದು ಸೊಳ್ಳೆ ಹೊಡೆಯುವಂತೆ ರಪ್ಪನೆ ನಾಟಕೀಯವಾಗಿ ಕೈಜೋಡಿಸಿ ನಮಸ್ಕರಿಸಿದ. ಅಷ್ಟರಲ್ಲಿ ಅವನ ಮೊಬೈಲ್ ರಿಂಗ್ ಆಯಿತು. ಎಲ್ಲೊ ಅರ್ಜೆಂಟಾಗಿ ಹೋಗಬೇಕೆಂದು ಮೇಲೆದ್ದ. ನಾನೂ ಮೇಲೆದ್ದೆ.



ಯಾಕೆ ಮಮ್ಮಿ... ಬೇಜಾರಾ... ನೀನು ಈ ರೀತಿಯಲ್ಲಿ ಅಲಂಕಾರ
ಮಾಡಿಕೊಳ್ಳೋದ್ರಿಂದಾನೆ.... ಕಾಸ್ಮೆಟಿಕ್ಸ್ ರೇಟ್ ಗಗನಕ್ಕೇರಿರೋದು... ಅಲ್ವಾ..

ಕಪಿನೀಪತಿಯೋ... ಪತಿ ನೀ ಕಪಿಯೋ

– ಬೇಲೂರು ರಾಮಮೂರ್ತಿ

ಕಪಿನೀಪತಿ ಸೊಂಟ ಕೆರ್ಕೊಂಡು ಜನಿವಾರ ಉಜ್ಕೊಂಡು ಅಡಿಗೆ ಮನೆ ಕಡೆ ನೋಡಿ ''ಏನ್ ಮಾಡ್ತಾ ಇದೀಯಾ ರೋಪ್ಸು ಕಾಫಿ ಕೊಡು ಅಂದ್ನಲ್ಲ'' ಅಂದರು. ಇನ್ನು ಹತ್ತು ನಿಮಿಷ ಕಳೆದ ಮೇಲೆ ಸುಬ್ಬಮ್ಮನವರ ಬರೋಣವಾಯ್ತು, ಕಾಫಿ ಲೋಟದೊಂದಿಗೆ ''ಏನು ಜನಿವಾರ ನೀವ್‌ಕೊಳೋದು, ಕಾಫಿ ಕುಡಿಯೋದು ಇದೇ ಆಯ್ತು, ಬೇರೆ ಏನೂ ಮಾಡಕ್ಕೆ ಗೊತ್ತಾಗಲ್ವ'' ಅಂದರು... ಕಾಫಿ ಗುಟುಕರಿಸುತ್ತ ಇದ್ಯಾಕೆ ಹೀಗೆ ಕೇಳ್ತೀಯ, ತಿಂಡೀನೂ ತಿನ್ತೀನಿ, ಊಟನೂ ಮಾಡ್ತೀನಿ'' ಅಂದು ತಮ್ಮ ಜೋಕಿಗೆ ತಾವೇ ನಕ್ಕರು. ಸುಬ್ಬಮ್ಮ ನಗಲಿಲ್ಲ, ಇದಕ್ಕೇನು ಕಮ್ಮಿ ಇಲ್ಲ ಅಂತ ಅಂದು ಒಳಕ್ಕೆ ಹೋದರು. ಯಾಕೆ ಇವಳಿಗೆ ನನ್ನ ಜೋಕ್ ಕ್ಯಾಚ್ ಆಗಲಿಲ್ಲ ಅಂತ ಕಪಿನೀಪತಿ ಯೋಚಿಸಿದರು ಆದರೆ ಜಗಲೀಕಟ್ಟೆಗೆ ಒಂದು ಒಳ್ಳೆ ವಿಷಯ ಸಿಕ್ತು ಅಂತ ಪಂಚೆ ತುದಿ ಕೈಲಿ ಹಿಡಿದು ಹೊರಟೇಬಿಟ್ಟರು.

ಸ್ವಲ್ಪ ವರ್ಷಗಳಿಂದ ಹೆಂಡ್ತಿ ತಮ್ಮನ್ನು ಯಾಕೋ ಅಸಡ್ಡೆ ಮಾಡ್ತಿದ್ದಾಳೆ ಅನಿಸಿದೆ. ಮಾತಾಡಿದರೆ ಸಿಡುಕೋದು, ಮಾತಲ್ಲಿ, ಕೆಲಸದಲ್ಲಿ ತಪ್ಪು ಹುಡುಕೋದು, ಒಂದೇ ವಾಕ್ಯದಲ್ಲಿ ಹೇಳಬೇಕು ಅಂದರೆ ನೀನು ಮೂರು ಕಾಸಿಗೂ ನಾಲಾಯಕ್ಕು ಅನ್ನೋತರಹ ಟ್ರೀಟ್ ಮಾಡೋದು. ಮೊನ್ನೆ ಗಣಪತಿ ಹಬ್ಬಕ್ಕೆ ಅರವತ್ತಾಯ್ತು ಇನ್ನು ಎಷ್ಟು ವರ್ಷ ಹೆಣಗೋದು ಈಗ ಆರಾಮವಾಗಿರೋಣ ಅಂದರೆ ಇವಳದು ಯಾಕೋ ಕಿರಿಕಿರಿ ಅಂದುಕೊಂಡರು. ಆದರೆ ನಾನು ಅವಳಲ್ಲಿ ತಪ್ಪು ಹುಡುಕ್ತಿಲ್ಲ, ಸುಮ್‌ಸುಮ್ನೆ ಸಿಡುಕ್ತಿಲ್ಲ ಪ್ರೀತಿಯಿಂದಲೇ ಮಾತಾಡಿಸ್ತೀನಿ. ನಾನು ಪ್ರೀತಿಯಿಂದ ಅವಳಿರುವಲ್ಲಿಗೇ ಹೋಗಿ ''ಸುಬ್ಬೂ'' ಅಂದರೆ ಅವಳೂ ಪ್ರೀತಿಯಿಂದ ''ಏನೂಂದ್ರೆ'' ಅನ್ನಬೇಕಲ್ಲ. ಹಾಗನ್ನಲ್ಲ, ಜೋರಾಗಿ ''ಏನ್ರೀ ಅದು ನಿಮ್ಮ ಪುರಾಣ ನನಗೆ ಕೆಲಸ ಇದೆ'' ಅಂತಾಳೆ. ಹೀಗೆ ಯಾಕಪ್ಪ ರೇಗಬೇಕು ಗಂಡ ಏನಾದರೂ ತಪ್ ಮಾಡಿದರೆ ರೇಗಲಿ ಯಾರು ಬೇಡಾಂತಾರೆ ಮದುವೆಯಾದ ಹೊಸದರಲ್ಲಿ ಹೀಗೆ ಹಿಂದೆ ಹೋಗಿ ''ಸುಬ್ಬು'' ಅಂದರೆ ಅವಳು ನಾಚುತ್ತಾ ''ಹಾಗೇ ಸ್ವಲ್ಪ ತಬ್ಬು'' ಅನ್ತಿದ್ದಳು ಈಗ ತಬ್ಬು ಹೋಗಲಿ ಬರೀ ತಬ್ಬಿಬ್ಬೇ. ಮಲಗೋದು ಲೇಟಾದ್ರೆ, ಬಂದು ಬಿದ್‌ಗೊಳ್ರೀ ಅಂತಾಳೆ. ಸರಿಯಾದ ಟೈಮಿಗೆ ಮಲಗಿದ್ರೆ ಆಹಾ ಆಗೇ ಬಿದ್ಕೊಂಬಿಟ್ರಾ ಅಂತಾಳೆ. ''ನೋಡಿ ಗೊರಕೆ ಹೊಡೆದ್ರೆ ನಾನು ಸುಮ್‌ನಿರಲ್ಲ'' ಅಂತಾಳೆ. ಏನಾದರೂ ಅಪ್ಪಿ ತಪ್ಪಿ ಸೊಂಟ ಸವರ್ತಾ ಸುಬ್ಬೂ ಅಂತ ಅಂದ್ರೆ'' ಕೈ ತೆಗಿರ್ರೀ ಇದು ಬೇರೆ ಕೇಡು'' ಅಂತಾಳೆ. ''ಹೋಗ್ಲಿ ನೀನೇ ಒಂದು ಟೈಂ ಟೇಬಲ್ ಹಾಕ್ಕೊಡೆ'' ಅಂದ್ರೆ ಅದೂ ಮಾಡಲ್ಲ. ಇನ್ನೂ ಪ್ರೀತಿಯಿಂದ ಮಾತಾಡಿದರೆ ಪ್ರೀತಿಯಿಂದ ಉತ್ತರ ಬಂದೇ ಇಲ್ಲ ''ಸುಬ್ಬು ನಿನ್ದು ತಿಂಡಿ ಆಯ್ತಾ'' ಅಂದ್ರೆ ''ಇಷ್ಟೊತ್ತಂಕ ತಿಂದೇ ಇರ್ತೀನಾ'' ಅಂತಾಳೆ. ''ಬಾ ಒಟ್ಟಿಗೇ ಊಟ ಮಾಡೋಣ''

ಅಂದ್ರೆ, ''ಏನು ಭೂಮದ ಕನಸಾ'' ಅಂತಾಳೆ. ಇದು ಇಬ್ಬರೇ ಇರುವಾಗಿನ ಕಥೆ ಆದರೆ ಮನೆಗೆ ಯಾರಾದರೂ ಬಂದರೆ ಅವರದು ನಾಯಿಪಾಡೇ.

ಕಪಿನೀಪತಿಯ ಕಥೆಯನ್ನು ಕಟ್ಟೆಯವರೆಲ್ಲ ಕೇಳಿಯಾದ ಮೇಲೆ ಎಲ್ಲರೂ ಒಂದೊಂದು ಚಿಟಿಕೆ ನಶ್ಯ ಮುಕ್ಕಿದರು. ಗೋಪಾಲಯ್ಯ ''ಹೌದು ಇದು ಎಲ್ಲರ ಮನೆ ಕಥೆನೇ'' ಅಂದರು. ''ನಿಮ್ಮನ್ಲೂ ಹೀಗೇನಾ'' ಅಂತ ಕಪಿನೀಪತಿ ಕೇಳಿದರೆ ''ಸ್ವಲ್ಪ ಹೆಚ್ಚುಕಮ್ಮಿ ಹಾಗೇನೇ'' ಅಂದರು. ''ಮತ್ತೆ ಇದಕ್ಕೆ ಏನಯ್ಯ ಮಾಡೋದು'' ಅಂತ ಕೇಳಿದರು ಗಂಗಾಧರ. ತೊಡೆ ತಟ್ಟಿ ಶಂಕರಯ್ಯ ಹೇಳಿದರು ''ನೋಡು ಎಷ್ಟೋ ವರ್ಷ ಅದೇ ಗಂಡನನ್ನ ನೋಡೀ ನೋಡೀ, ಅವರ ಮಾತು ಕೇಳಿ, ಅವರೊಂದಿಗೆ ಇದ್ದು, ಕೂತು, ಉಂಡು, ಮಲಗಿ ಅವರಿಗೆ ಒಂಥರಾ ಅಲರ್ಜಿ ಬಂದುಬಿಟ್ಟಿರುತ್ತೆ ಅದಿಕ್ಕೆ ಹಾಗಂತಾರೆ'' ಅಂದರು. ''ಒಳ್ಳೆ ಚೆನ್ನಾಗಿ ಹೇಳಿದ್ರಿ, ಗಂಡ ಅಂದ್ರೆ ಹಾಗೇ ಅಲ್ವೆ ಅದು ಇಡೀ ಬದುಕಿಗೆ ತಾನೇ ಆದರೆ ನಮಗೆ ಅವರನ್ನ ಕಂಡರೆ ಹಾಗನಿಸೋಲ್ಲ ಯಾಕೆ'' ಅಂತ ಕೇಳಿದರು ಗೋಪಾಲಯ್ಯ. 'ನನ್ನ ಪಾಯಿಂಟ್ ಅದಲ್ಲ ನಾವು ಅವರ ಕೈ ಹಿಡಿದೆವು ಬಾಳು ಕೊಟ್ಟೆವು ಪ್ರೀತಿ ಕೊಟ್ಟೆವು, ಮಕ್ಕಳನ್ನು ಕೊಟ್ಟೆವು ಆದರೆ ಕೊನೆಗಾಲದಲ್ಲಿ ಅಸಡ್ಡೆ ಯಾಕೇಂತ' ಅಂತ ಕೇಳಿದರು ಕಪಿನೀಪತಿ. 'ನೀ ಮಾತ್ರ ಹಾಗಂದ್ಕೊಂಡಿದೀಯ. ಆದರೆ ಅವರೂ ನಿನ್ನ ಕೈ ಹಿಡೀಲಿಲ್ವ, ಪ್ರೀತಿ ಕೊಡ್ಲಿಲ್ವ, ಬಾಳು ಕೊಡ್ಲಿಲ್ವ, ಮಕ್ಕಳನ್ನ ಕೊಡ್ಲಿಲ್ವ... ವಯಸ್ಸಾದ್ಮೇಲೆ ಕೆಲವು ಗಂಡಸರ ಪರಿಸ್ಥಿತಿ ಹೇಗೇಂದ್ರೆ ಮನ್ನಿಟ್ಕೊಳೋ ಹಾಗಿಲ್ಲ ಆಚೆಗೆ ಬಿಸಾಕೋ ಹಾಗಿಲ್ಲ ಅನ್ನೋ ಹಾಗೆ ಅಂದರು' ಇನ್ನು ''ಒಂದು ಪಾಯಿಂಟು... ವಯಸ್ಸಾದ ಮೇಲೆ ಹೆಂಗಸರಿಗೆ ಸಾಕು ಸಾಕು ಅನ್ನೋ ಬುದ್ಧಿ ಜಾಸ್ತಿ ಗಂಡಸರಿಗೆ ಬೇಕು ಬೇಕು ಅನ್ನೋ ಚಪಲ ಜಾಸ್ತಿ. ಆದರಿಂದ ಈ ರೀತಿ ತಿಕ್ಕಾಟ'' ಅಂದರು ಶಂಕರಯ್ಯ. ಗೋಪಾಲಯ್ಯ ''ನೀ ಯಾವ ವಿಚಾರ ಹೇಳ್ತಿದೀಯ'' ಅಂದರೆ ಶಂಕರಯ್ಯ ''ಎಲ್ಲಾ ವಿಚಾರದಲ್ಲೂ'' ಅಂದರು.

ಎದುರಿನ ಹೋಟೆಲ್ ಹುಡುಗ ಮೂರರಲ್ಲಿ ನಾಲ್ಕು ಕಾಫಿ ತಂದ ''ಯಾರೋ ಕಾಫಿಗೆ ಹೇಳಿದ್ದು ಅಂದ್ರೆ ''ನಿಮ್ಮಗಳ ಮುಖ ನೋಡಿದ್ರೆ ಮನೇಲಿ ಕಾಫಿ ಕೊಟ್ಟ ಹಾಗಿಲ್ಲ'' ಅಂದ. ಕಪಿನೀಪತಿ ಸಿಟ್ಟಿಂದ ತೆಗೆದು ಒಂದು ಬಿಟ್ಟಾಂದ್ರೆ ಅಂದರು.

ಕಾಫಿಯಾದ ಮೇಲೆ ಇನ್ನೊಂದು ರೌಂಡು ನಶ್ಯ ಮುಕ್ಕಿದರು. ಇದಕ್ಕೆ ಪರಿಹಾರವೇನು ಅಂತ ಕೇಳಿದರು ಗೋಪಾಲಯ್ಯ ''ಸಮಸ್ಯೆ ಇದ್ರಲ್ವೆ ಪರಿಹಾರ'' ಎಂದು ನಕ್ಕರು ಶಂಕ್ರಯ್ಯ. ''ಯಾಕೆ ಇದು ಸಮಸ್ಯೆ ಅಲ್ವೆ'' ಅಂದರು ಕಪಿನೀಪತಿ ಶಂಕ್ರಯ್ಯ ನಕ್ಕು ''ಸಮಸ್ಯೆ ಅಂದ್ಕೊಂಡ್ರೆ ಸಮಸ್ಯೆ, ನಮ್ಮನ್ನ ನಮ್ಮ ಹೆಂಡ್ತಿ ಏನಾದರೂ ಅನ್ನದೇ ಬೇರೆಯವರು ಅನ್ನಾತ್ರಾ! ಅಂದ್ಕೊಳ್ಳಿ ಬಿಡು. ಎರಡು ಹೊತ್ತು ಊಟ ಹಾಕ್ತಾರೆ ತಾನೇ'' ಅಂದರು ಗೋಪಾಲಯ್ಯ. ಸಿಟ್ಟಿಂದ ''ವಯಸ್ಸಾಯ್ತು ಅಂತ ನಾವು ನಾಯಿ ಪಾಡಿಗೆ ಸಿದ್ಧವಾಗಿರಬೇಕಾ'' ಅಂತ ಕೇಳಿದರು. ಆಗ ಶಂಕ್ರಯ್ಯ

''ನಿಂಗೆ ಸ್ವಲ್ಪ ಡೀಟೈಲಾಗಿ ಹೇಳ್ತೀನಿ ಕೇಳು, ವಯಸ್ಸಾದ ಮೇಲೆ ಹೆಂಗಸರಿಗೆ ಗಂಡನ ಮೇಲೆ ಪ್ರೀತಿ ಇರಲ್ಲ ಅಂತಲ್ಲ ಇರುತ್ತೆ ಆದನ್ನ ತೋರಿಸೋ ವಿಧಾನ ಬೇರೆ ಅಷ್ಟೆ.

ಅವರಿಗೂ ಅಷ್ಟೆ ಸೀಪೇಸು ಹತ್ತಿರ ಹೋಗಬೇಕೂಂತ ಇಲ್ಲ, ತಪ್ಕೊಬೇಕೂಂತಿಲ್ಲ ಮನೇಲಿದ್ರೆ ಸಾಕು ಕಣ್ಣೆದುರಿಗೆ ಇದ್ರೆ ಸಾಕು ದೂರದಿಂದಲೇ ಪ್ರೀತಿ ಮಾಡ್ತಾರೆ. ಹೀಗೆ ಸಿಡುಕೋದೂ ಪ್ರೀತಿ ಒಂದು ಮುಖಾನೇ. ಗಂಡನಿಗೆ ಎಷ್ಟೇ ವಯಸ್ಸಾದ್ರೂ ಪ್ರೀತಿ ವಿಚಾರದಲ್ಲಿ ನಾನಿನ್ನು ಹುಡುಗನೇ ಅಂದ್ಕೊತಾನೆ. ಮತ್ತೆ ಮೊದಲಿಂದ ಶುರು ಮಾಡೋಣ ಅಂತ ಆಸೆ ಪಡ್ತಾನೆ ಆದ್ರೆ ಹೆಣ್ಣು ಹಾಗಲ್ಲ, ಆದಿಕ್ಕೆ ಅವರು ಏನಾದರೂ ಅಂದ್ರೂ, ಅಥವಾ ಅನ್ತಾನೇ ಇರ್ತಾರೆ ಅಂದ್ರೆ ಪ್ರೀತಿ ಇದೆ ಅಂತನೇ ಅರ್ಥ. ಶರೀರ ಮಾಗಿರುತ್ತೆ, ಬಾಗಿರುತ್ತೆ, ಬೆಂಡಾಗಿರುತ್ತೆ ಮಕ್ಕಳು ಮೊಮ್ಮಕ್ಕಳನ್ನು ನೋಡಿ ಸುಖ ಕಾಣೋ ವಯಸ್ಸು ಅಲ್ವೆ'' ಅಂದರು.

ಅವರ ಮಾತಿಗೆ ಎಲ್ಲರೂ ಗೋಣು ಆಡಿಸಿದರು ಕಲ್ಲಿನ ಕಂಬಕ್ಕೆ ಕೈ ಒತ್ತಿಕ್ಕೊಂಡು ಎದ್ದು ಕಪಿನೀಪತಿ ''ಹಾಗಾದ್ರೆ ಅವಳು ನನ್ನನ್ನು ಅಸಡ್ಡೆ ಮಾಡ್ತಿಲ್ಲ ಅಂತೀಯಾ'' ಅಂತ ಕೇಳಿದರು ''ಖಂಡಿತ ಇಲ್ಲ ಪ್ರೀತಿಗೆ ಹಲವಾರು ಮುಖಗಳಿವೆ ಆದರಲ್ಲಿ ಇದೂ ಒಂದು ಅಂದ್ಕೊ ನೀನೂ ಅಷ್ಟೆ, ಅವರು ನಡ್ಕೊಳೋದ್ರಲ್ಲಿ ತಪ್ ಹುಡುಕಬೇಡ ಸೂರ್ಯನೇ ಬೆಳಿಗ್ಗೆ ತಂಪಾಗಿರ್ತಾನೆ ಮಧ್ಯಾನ ಸುಡ್ತಾನೆ ಮತ್ತೆ ಸಂಜೆಗೆ ತಂಪಾಗ್ತಾನೆ ಮನುಷ್ಯನೂ ಹಾಗೆ ಬದಲಾವಣೆ ಆಗ್ತಾನೇ ಇರ್ತಾನೆ'' ಅಂದರು ಶಂಕ್ರಯ್ಯ.

ಕಪಿನೀಪತಿ ಮನೆಗೆ ಹೋಗ್ತಾ ಮಲ್ಲಿಗೆ ಹೂವು ತಗೊಂಡ್ ಹೋದ್ರು. ಮೊದಲಾದರೆ ನೀವೇ ಮುಡಿಸಿ ಅಂತಿದ್ಲು ಅದು ಪ್ರೀತಿ. ಈಗ ತಂದ್‌ಕೊಟ್ರೆ ಅವಳೇ ಮುಡ್ಕೊತಾಳೆ, ಅದೂ ಪ್ರೀತಿನೇ. ಸಣ್ಣಗೆ ರೇಗಿದ್ರೂ ಪ್ರೀತಿನೇ. ಸಿಡುಕಿದ್ರೂ ಪ್ರೀತಿನೇ ಇದು ನನಗೆ ಅರ್ಥವಾಗದೇ ಒಳ್ಳೆ ಕಪಿ ತರಹ ಯೋಚನೆ ಮಾಡಿದ್ನಲ್ಲ ನನ್ನ ಹೆಸರು ಸರಿಯಾಗಿದೆ ಅಂದ್ಕೊಂಡು ಮನೆಗೆ ಹೊರಟರು.

ಮೊಮ್ಮಗನನ್ನು ಎತ್ತಿಕ್ಕೊಂಡು ನಿಂತಿದ್ದ ಸುಬ್ಬಮ್ಮ ಅವರ ಕೆನ್ನೆಗೆ ಮುತ್ತುಕೊಟ್ಟು ಅಲ್ನೋಡೋ ತಾತ ಬಂದ್ರು ಅಂದರು. ಕಪಿನೀಪತಿ ಖುಷಿಯಿಂದ ಕೆನ್ನೆ ಸವರಿಕೊಂಡು ತಲಪ್ತು ಅಂದ್ಕೊಂಡ್ರು.

ಪಶ್ಚಾತ್ತಾಪ

ಅವಿವಾಹಿತರಿಗಿಂತ
ವಿವಾಹಿತರು ಹೆಚ್ಚುಕಾಲ
ಬದುಕುತ್ತಾರಂತೆ
ಸರಿಯೇ
ಮದುವೆಯಾದುದಕ್ಕಾಗಿ
ಪಶ್ಚಾತ್ತಾಪಿಸಲು
ದೀರ್ಘಕಾಲ ಬೇಡವೇ

– ಸಿ.ಪಿ.ಕೆ

ಯಜಮಾನರು......

– ಎಚ್.ಗೋಪಾಲಕೃಷ್ಣ

ನಿಮಗೂ ಹೀಗೆಲ್ಲಾ ಆಗುತ್ತೋ ಇಲ್ಲವ್ವೋ ನನಗೆ ತಿಳೀದು.ನನಗೋ ಯಾವಾಗಲೂ ಒಂದು ಥರಹಾ ವಿಚಿತ್ರವಾದ ಅನುಭವಗಳೇ ಆಗೋದೂ..... ಅಂತ ನಮ್ಮ ಸುಬ್ಬು ಮಾತು ಶುರು ಹಚ್ಚಿದ ಅಂದರೆ ನಮಗೇನೋ ಇದೆ ಇವತ್ತು ಅಂತ ಖಾತ್ರಿ ಆಗಿಬಿಡುತ್ತೆ.

ಅವನ ಮಾತಿಗೆ ಕಿವಿ ಕೊಡುತ್ತಾ ಅದೇನಯ್ಯಾ ನಿನಗೆ ಮಾತ್ರಾ ಆದ ಅನುಭವ? ಅದೂ ಬೇರಾರಿಗೂ ಆಗದೇ ಇರೋದು.....ಅಂತ ಕೇಳಿದೆವು.

ಅವನು ಹೇಳಿದ ಕಥೆ ಇದೋ ಇಲ್ಲಿಂದ ಮುಂದಕ್ಕೆ....

ಯಾವಾಗಲಾದರೂ ಟೈಮು ಅಂತ ಸಿಕ್ಕಿದರೆ ಊರಾಚೆ ಸುತ್ತಕ್ಕೆ ವಾಕಿಂಗು ಅಂತ ಹೋಗ್ತೀನಲ್ಲಾ? ಕಳೆದ ವಾರ ಹೀಗೇ ಯಲಹಂಕದ ಕಡೆಗೆ ಹೋಗಿದ್ದೆ. ಅವಾಗವಾಗ ನಾನು ಹೀಗೇನೇ ಯಲಹಂಕ, ದೊಡ್ಡಬಳ್ಳಾಪುರದ ರಸ್ತೆ, ರಾಜಾನುಕುಂಟೆ....ಈತರಹ ಹೋಗ್ತೀನಿ, ನಿಮಗೆ ಗೊತ್ತಲ್ಲಾ? ಯಲಹಂಕ ದಾಟಿ ಸ್ವಲ್ಪ ಮುಂದೆ ಹೋಗಿದ್ದೆ. ರೈಲ್ವೇ ಗೇಟಿನ ಹತ್ತಿರಹತ್ತಿರ ಬಂದಿದ್ದೆ ಅಂತ ಕಾಣುತ್ತೆ. ಒಂದು ಪುಟ್ಟ ಪೆಟ್ಟಿಗೆ ಅಂಗಡಿ ರಸ್ತೆ ಪಕ್ಕದಲ್ಲೇನೆ. ಅದರಲ್ಲಿ ಬೀಡಿ ಸಿಗರೇಟು ಟೀ ಮಾರೋದು ನಡೆದಿತ್ತು. ಇಂತ ಪುಟ್ಟ ಡಬ್ಬ ಅಂಗಡಿ ಕಂಡರೆ ನನಗೇನೋ ಒಂದು ತರಹ ಖುಷಿ. ಖುಷಿ ಯಾಕೆ ಅಂತೀರಾ? ದೊಡ್ಡ ದೊಡ್ಡ ಹೋಟಲ್ಲು ಮಾಲುಗಳ ಸವಾಲನ್ನ ಧೈರ್ಯವಾಗಿ ಎದುರಿಸಿ ನಿಂತು ಈ ಅಂಗಡಿಗಳು ಯಾರ ಮುಲಾಜೂ ಇಲ್ಲದೇ ತಮ್ಮ ವ್ಯಾಪಾರ ನಡೆಸಿಕೊಂಡು ಹೋಗುತ್ತವಲ್ಲಾ ಅಂತ. ಮಲ್ಟಿ ನೇಷನಲ್ಲು, ಎಂ.ಎನ್.ಸೀ.ಗಳು ಮಾಲುಗಳು ಬಜ಼ಾರುಗಳು ಇವು ಯಾವುದರ ಬಗ್ಗೆ ಮಾತಾಡೋದಿಕ್ಕೆ ಹೋದರೂನೂ ಕೊನೇಗೆ ನಾವು ಬರೋದು ಇವೆಲ್ಲವ್ವೂ ಬಂದು ನಮ್ಮ ಲೋಕಲ್ ವ್ಯಾಪಾರವನ್ನ ವಹಿವಾಟನ್ನ ನಮ್ಮ ಕೈನಿಂದ ಕಿತ್ತುಕೊಂಡುಬಿಟ್ಟವು ಅಂತ ! ಆದರೆ ಈ ಡಬ್ಬಿ ಅಂಗಡಿಗಳು ನೋಡಿ ಯಾರೇ ಬಂದರೂ ಕೇರೇ ಮಾಡದೇ ತಮ್ಮ ವ್ಯಾಪಾರವನ್ನ-ಚಾ ಕಾಸಿ ಮಾರೋದು, ಬೀಡಿ ಸಿಗರೇಟು ಮಾರೋದು ಇವನ್ನ ಒಂದೇ ಒಂದು ಚೂರು ಆತಂಕವೂ ಇಲ್ಲದೇ ನಡೆಸಿಕೊಂಡು ಹೋಗುತ್ತವೆ. ಅದಕ್ಕೇ ನನಗೆ ಡಬ್ಬ ಅಂಗಡಿ ಕಂಡರೆ ಇಷ್ಟ. ಅಂಗಡಿಗೆ ಹೋದನಾ? ಅಂಗಡಿ ವಿಷಯ ಮತ್ತೊಂದು ಹೇಳೋದು ಮರೆತಿದ್ದೆ. ಹಾಫ್ ಟೀ ಅಂತ ಇಲ್ಲಿ ಚಾ ಮಾರ್ತಾರೆ. ಅರ್ಧ ಕಪ್ಪು ಅಂತ ಲೆಕ್ಕ. ಪ್ಲಾಸ್ಟಿಕ್ ಡಿಸ್ ಪೋಸಬಲ್ ಲೋಟದಲ್ಲಿ ಈ ಟೀ ಹಾಕಿ ಕೊಡ್ತಾರೆ. ಬರೇ ಒಂದೂವರೆ ಅಥವಾ ಎರಡು ರೂಪಾಯಿ ಇದಕ್ಕೆ. ಆದರೆ ಅದೇನು ರುಚಿ ಅಂತೀರೀ? ಯಾವ ಫೈವ್ ಸ್ಟಾರ್ ಹೋಟಲ್ಲಿನ ಟೀಗೂ ಸಹಾ ಅಂಥಹ ರುಚಿ ಇರೋಲ್ಲ. ಅಂಗಡೀಗೆ ನಡೆದೆ ಅಂದೆನಾ? ಹಾಫ್ ಚಾಯ್ ಅಂದೆ. ಅಂಗಡೀಲಿದ್ದವನು ಅರ್ಧ ಚಾ ಕೊಟ್ಟ. ಬಿಸಿ ಬಿಸಿ ಚಾ ಕುಡೀತಾ ಅತ್ತ ಇತ್ತಾ ನೋಡುತ್ತಿದ್ದೆ. ಆಗ ಏನಾಯಿತು ಗೊತ್ತಾ?

ನನ್ನ ಹತ್ತಿರದಲ್ಲಿಯೇ ಒಬ್ಬರು ಮುದುಕರು ಬಂದು ನಿಂತರು. ಸುಮಾರು ಅರವತ್ತೈದು ಎಪ್ಪತ್ತರ ವಯಸ್ಸು, ಹಣೇಗೆ ಗಂಧ ಹಚ್ಚಿ ಅದರ ಮೇಲೆ ವಿಭೂತಿ ಇಟ್ಟುಕೊಂಡಿದಾರೆ. ಬಿಳೀ ಬಣ್ಣದ ಜುಬ್ಬಾ, ಪಂಚೆ, ಕೊರಳ ಸಂದಿಯಿಂದ ಕಾಣಿಸುತ್ತಿರೋ ರುದ್ರಾಕ್ಷಿ ಸರ-ಯಾರಿಗೇ ಆಗಲೀ ನೋಡಿದಕೂಡಲೇ ಶರಣು ಅಂತ ಹೇಳಲೇಬೇಕು ಅನ್ನುವಂಥಹ ಸೌಮ್ಯವಾದ ಮುಖ. ನನ್ನ ಕಡೇಗೆ ನೋಡಿದರು. ನಾನೂ ಅವರ ಕಡೇಗೆ ನೋಡಿದೆ. ಯಾಕೋ ನಮಸ್ಕಾರ ಅಂತ ಅನ್ನಬೇಕು ಅಂತ ನನಗೆ ಅನ್ನಿಸಿತು. ನಮಸ್ಕಾರ ಅಂತ ಅಂದೂಬಿಟ್ಟೆ. ಒಂದು ಸೆಕೆಂಡು ನನ್ನನ್ನ ನೋಡಿದರು. ಅವರೂ ನಮಸ್ಕಾರ ಅಂತ ಅಂದರು. ಚಹಾ ಕುಡಿಯೋದಕ್ಕೆ ಬಂದಿದಾರೇನೋ ಅಂತ ಅನ್ನಿಸಿತು. ಟೀ ಕುಡೀತೀರಾ ಅಂದೆ. ತಲೆಯಾಡಿಸಿದರು. ಅಂಗಡಿಯಾತ ಅವರಿಗೂ ಅರ್ಧ ಟೀ ಕೊಟ್ಟ. ಟೀ ಮುಗಿಸಿದೆವು. ಯಾವೂರಾಯಿತು ತಮಗೆ ಅಂತ ಮಾತು ಆರಂಭಿಸಿದೆ. ಅವರೂ ಟೀ ಕುಡಿದು ಲೋಟವನ್ನ ಕಸದ ಡಬ್ಬಕ್ಕೆ ಎಸೆದಿದ್ದರು. ಊರೇ? ಅಂತ ಕೇಳುತ್ತಾ ಅಂಗಡೀಲಿ ಅದೇನೋ ಕಣ್ಣಾಡಿಸುತ್ತಿದ್ದರು.

ಏನು ಹುಡುಕ್ತಾ ಇದೀರೀ ಏನು ಬೇಕು? ಅಂದೆ.

ಒಂದು ಐವತ್ತು ಪೈಸೆ ಕೊಡಿ ಅಂತ ಅವರು ಕೇಳಬೇಕೇ?

ಯಾಕೆ ಯಜಮಾನ್ರೇ ಏನು ಬೇಕು ಹೇಳಿ ಅಂದೆ.

ಐವತ್ತು ಪೈಸೆ ಕೊಡಿ ಬೀಡಿ ತಗೋಬೇಕು ....!

ನನಗೆ ಎಂತಾ ಷಾಕ್ ಆಯಿತೂ ಅಂತೀರೀ?

ಈ ವಯಸ್ಸಿನಲ್ಲಿ ಇಷ್ಟು ಸಭ್ಯರಾಗಿ ಕಾಣೋ ಮನುಷ್ಯ ಬೀಡಿ ತಗೋಬೇಕು ಕಾಸುಕೊಡಿ ಅಂತ ಕೇಳ್ತಾ ಇದಾರಲ್ಲಾ ಅಂತ....

ಐವತ್ತು ಪೈಸೆ ಕೊಟ್ಟೆ. ಅಂಗಡಿಯವನಿಗೆ ಅದನ್ನು ಕೊಟ್ಟು ಬೀಡಿ ತಗೊಂಡರು. ಬೆಂಕಿಪೊಟ್ಟಣ ತಗೊಂಡು ಬೀಡಿ ಹತ್ತಿಸಿಕೊಳ್ತಾರೆ ಆಮೇಲೆ ಅವರನ್ನ ಮಾತು ಆಡಿಸಿ ಹೀಗೆ ಬೀಡಿ ಸೇದೋದು ಅದೂ ನಿಮ್ಮ ಹಾಗೆ ವೇಷ ಧರಿಸಿರೋರು ತಪ್ಪು ಅಲ್ಲವೇ ಅಂತ ಕೇಳೋಣಾ ಅಂತ ತಡೆದೆ. ಅದೂ ಈ ವಯಸ್ಸಿನಲ್ಲಿ ಬೀಡಿ ಸೇದಬಹುದೇ ಸಾರ್?

ಯಜಮಾನರು ಬೀಡಿ ತಗೊಂಡರು. ಜೇಬಿನಲ್ಲಿ ಬೀಡಿ ಇಟ್ಟುಕೊಂಡರು. ಸರ ಸರ ಅಂತ ಹೆಜ್ಜೆ ಹಾಕಿಬಿಟ್ಟರು. ಅವರ ಹಿಂದೆ ನನ್ನ ಕಣ್ಣು ಹರಿಸಿದೆ. ದೂರದ ಮರದ ನೆರಳಿನಲ್ಲಿ ಒಬ್ಬ ಭಿಕ್ಷುಕ-ಸುಮಾರು ಇವರ ವಯಸ್ಸಿನವನೇ ಕೂತಿದ್ದ. ಯಜಮಾನರು ನೇರ ಅಲ್ಲೀಗೆ ನಡೆದರು. ಏನೋ ಚೆನ್ನಾಗಿದೀಯಾ? ಅಂತ ಅವರು ಕೇಳಿದ್ದು ನಮಗೆ ಕೇಳಿಸಿತು. ತಗೋ ಬೀಡಿ ತಂದಿದೀನಿ. ಮುಂದಿನವಾರದವರೆಗೆ ಇದರಲ್ಲೇ ಮಾಡ್ಕೋ ಹೆಚ್ಚು ಹೊಗೆ ಸೇದಿ ಆರೋಗ್ಯ ಹಾಳು ಮಾಡಿಕೋಬೇಡಾ....

ಆ ನಿಮಿಷದಲ್ಲಿ ನನ್ನ ಮನಸ್ಸು ಹೇಗಾಗಿತ್ತು ಅಂತ ನಿಮಗೆ ಹೇಳೋದಿಕ್ಕೆ ಆಗೋದಿಲ್ಲರಯ್ಯಾ....ಅಂದ!

ನಮಗೂ ಹಾಗೇ ಆಗಿತ್ತು !!

★★★

ಶನಿ ಹಠಾವ್......

– ಪ್ರಭಾ

ಪ್ಲೂಟೋ ಗ್ರಹವನ್ನು ಸೌರಮಂಡಲದಿಂದ ತೆಗೆದು ಹಾಕಿಬಿಟ್ಟು ವಿಶ್ವ ಖಗೋಳ ವಿಜ್ಞಾನಿಗಳು ನಿರ್ಣಯ ತೆಗೆದು ಕೊಂಡಿದ್ದಾರಂತೆ. ಇನ್ನುಮೇಲೆ ನಮ್ಮ ಹಳೇ ಸೈನ್ಸ್ ಪುಸ್ತಕಗಳನ್ನು ರೀ ರೈಟ್ ಮಾಡಬೇಕಾಗುತ್ತೆ, ಹೊಸಾ ಆರ್ಡರುಗಳು ನಮ್ಮ ಮುದ್ರಕರಿಗೆ ಸಿಗುತ್ತೆ, ನಮ್ಮ ಮೇಷ್ಟರುಗಳು ತಮ್ಮ ಹಳೇ ನೋಟ್ಸನ್ನ ಬಿಸಾಕಿ ಹೊಸಾ ನೋಟ್ಸನ್ನ ಬರೆದುಕ್ಕೋಬೇಕಾಗುತ್ತೆ, ನಮ್ಮ ಮೇಡಮ್ಮುಗಳು ಅವರ ತಾತನಕಾಲದ ಪಾಠದಿಂದ ಆಚೆ ಬಂದು ಪ್ಲೂಟೋ ಅಂತ ಒಂದು ಗ್ರಹ ಇತ್ತು ನಮ್ಮ ಕಾಲದಲ್ಲಿ, ಈಗ ಅದು ಇಲ್ಲೈ... ಅಂತ ಹೇಳಬೇಕಾಗುತ್ತೆ ನಮ್ಮ ಜ್ಯೋತಿಷಿಗಳು ಈ ಒಂಬತ್ತನೇ ಗ್ರಹದ ಬದಲಿಗೆ ಬೇರೆ ಏನಾದರೂ ಹುಡುಕಬೇಕಾಗುತ್ತೆ. ಪಾಪ ಈ ಖಗೋಳಿಗಳು ಅದೇನು ಗೋಳು ತಂದಿಟ್ಟರು ನಮ್ಮ ಬಡ ಜ್ಯೋತಿಷಿಗಳಿಗೆ ಅಂತ ಪೇಚಾಡಿಕೊಳ್ಳುತ್ತಾ ಇದ್ದೆ. - ಹೀಗೆ ಒಂದು ಗ್ರಹ ಕಡಿಮೆ ಆಗಿದ್ದರಿಂದ ಆಗಲಿರುವ ವ್ಯತ್ಯಾಸವನ್ನ ಪಟ್ಟಿಮಾಡುತ್ತಿದ್ದೆ. ಒಂದು ಗ್ರಹ ಕಡಿಮೆಯಾದರೆ ನಮ್ಮಂಥೋರಿಗೆ ಅದೇನೂ ವ್ಯತ್ಯಾಸ ಕಾಣದೇ ಇರಬಹುದು: ಆದರೆ ಇದರಿಂದಲೇ ತಮ್ಮ ಬಾಳು ಸಾಗಿಸುತ್ತಾ ಇದಾರಲ್ಲಾ ಅವರುಗಳ ಪಾಡೇನು ಅಂಬುವ ಚಿಂತೆ ನನ್ನದು.

ಅದೇ ಸಮಯಕ್ಕೆ ನಮ್ಮ ವಿಚಾರವಾದಿ ಗೋಪಣ್ಣ ಮನೇಗೆ ಬಂದ.

ಗ್ರಹಗಳು ಗ್ರಹಗತಿಗಳು ಮಹಾಬುರುಡೆ ಅಂತ ಲಾಗಾಯ್ತಿನಿಂದ ಗೋಪಣ್ಣ ಪ್ರಚಾರ ಮಾಡಿಕೊಂಡೇ ಬಂದಿರೋನು, ಐವತ್ತೈದು ವರ್ಷದ ಹಿಂದೆ ಹುಟ್ಟಿದಾಗಲಿಂದಲೂ ಈ ತನಕ ಯಾವ ಜ್ಯೋತಿಷಿಯನ್ನೂ ನೋಡಿಲ್ಲದ ಒಬ್ಬ ಮನುಷ್ಯ ಈ ಬೆಂಗಳೂರಿನಲ್ಲಿ, ಈ ಮೈಸೂರಿನಲ್ಲಿ, ಈ ಭರತಖಂಡದಲ್ಲಿ ಆಷ್ಟೇ ಏಕೆ ಈ ವಿಶ್ವದಲ್ಲಿ ಇದಾನೆ ಅಂದರೆ ಅದು ಈತನೇ ಅಂತ ನಮ್ಮ ಗುಂಪಿನಲ್ಲಿ ಫೇಮಸ್ಸು !

ಇಂಥವನೊಬ್ಬನು ಇದಾನೆ ಅಂದರೆ ಆತ ಈ ಗೋಪಣ್ಣನೇ ಅಂತ ನಮ್ಮ ಏರಿಯಾದಲ್ಲಿ ಪ್ರಖ್ಯಾತ ಈತ! ಅದಕ್ಕಿಂತಲೂ ಈತ ಹೆಚ್ಚಾಗಿ ಫೇಮಸ್ ಆಗಿರೋದು ಯಾಕೆ ಅಂದರೆ ಇವನ ಗಡ್ಡದ ವಿಶೇಷದಿಂದ. ಇವರಣ್ಣ ಇವನ ಮೇಲೆ ಒಂದು ಒಳ್ಳೇ ಜೋಕನ್ನ ಅವಾಗವಾಗ ಹೊಡೀತಿರ್ತಾನೆ. ಇವನ ಗಡ್ಡ ಮೂರೂವರೆ ವಾರದ ಬೆಳವಣಿಗೆ ಆಗಿದ್ದರೆ ಈತ ಒಬ್ಬ ಇಂಟೆಲೆಕ್ಚುಯಲ್ಲು, ಆರೂವರೆ ವಾರದ್ದು ಆಗಿದ್ದರೆ ಅದು ಫಿಲಾಸಫರ್‌ದು, ಎಂಟು ವಾರದ್ದು ಆಗಿದ್ದರೆ ಅದು ಪೆರಿಯಾರ್‌ದು ಅಂತ ಲೆಕ್ಕ ಕಣ್ರಯ್ಯಾ. ಪೆರಿಯಾರ್ ಅಂದರೆ ಗೊತ್ತಲ್ಲಾ - ದೇವರನ್ನು ನಂಬುವವ ಮುಠ್ಠಾಳ ಅಂತ ಇಡೀ ತಮಿಳುನಾಡಿನಲ್ಲಿ ಒಂದು ಚಳುವಳಿ ನಡೆಸಿದ ಮನುಷ್ಯ. ಗಡ್ಡವೇ ಇಲ್ಲದಿದ್ದಾಗ ಅವನು ಸಂಪೂರ್ಣ ಹೆಂಗರಳಿನ ಮನುಷ್ಯ ಕಣ್ರಯ್ಯಾ. ಅವನ ಹತ್ತಿರ ಸಾಲ ಗೀಲ ಪೀಕಿಸಬೇಕಿದ್ದರೆ ಅವನು ಗಡ್ಡ ಮಾಡಿಕೊಂಡಿರ್ತಾನಲ್ಲಾ ಅದೇ ದಿವಸ ಸುಸಮಯ -

ಎಷ್ಟು ಪೀಕಿಸಬಹುದೋ ಅವಾಗಲೇ ಪೀಕಿಸಿಬಿಡಬೇಕು ಅಂತ..... ಸಾಲಕ್ಕೆ ಮೊಂಬುಹಾಕುವ ನಾವೆಲ್ಲರೂ ಅವನು ನುಣ್ಣಗೆ ಕಾಣಿಸುವ ದಿನವನ್ನು ಎದುರು ನೋಡುವುದರಿಂದ ಅವನನ್ನ ವಾರಕ್ಕೆ ಎರಡು ಭಾರಿಯಾದರೂ ಸಂಧಿಸುತ್ತೇವೆ.

ಪ್ಲೂಟೋ ಢಮಾರ್ ಅಂತ ಅಂದಿತು ಗೊತ್ತು ತಾನೇ? ಅಂದ!

ಹೌದಯ್ಯಾ ಪ್ಲೂಟೋ ಹೋಯಿತು... ಅಂದೆ.

ನನ್ನನ್ನ ಕೇಳಿದ್ದರೆ ನಮ್ಮ ಒಂಬತ್ತೂ ಗ್ರಹಗಳೂ ನಾಲಾಯಖ್ ಅಂತ ಓಡಿಸಿಬಿಡುತ್ತಿದ್ದೆ. ಅವುಗಳಿಂದ ಆಗ್ತಿರೋ ಉಪಯೋಗಕ್ಕಿಂತಲೂ ಹಾನೀನೇ ಜ್ಯಾಸ್ತಿ... ಎಷ್ಟು ಮ್ಯಾನ್ ಅವರ್ಸ್ ಈ ಗ್ರಹಶಾಂತೀಗೆ ಹೋಗುತ್ತಯ್ಯಾ.....? ಅಂದ!

ಆತ ಹೀಗೆ ಮಾತು ಶುರು ಮಾಡಿದರೆ ನಾವು ತೆಪ್ಪಗೆ ಪಕ್ಕದ ಗಲ್ಲೀಗೆ ಹೋಗಿರೋ ಕುತ್ತಾ ರೀತಿ, ಇನ್ನೂ ವಿಷದವಾಗಿ ಹೇಳಬೇಕೂಂದರೆ - ವೈರಿ ರಾಜ್ಯದಲ್ಲಿನ ನಮ್ಮ ರಾಜ್ಯಪಾಲರ ರೀತಿ ಆಗಿಬಿಡ್ತೇವೆ.

ನನಗೆ ಅಲ್ಲಿ ವಿಜ್ಞಾನಿಗಳು ಸೇರಿ ಪ್ಲೂಟೋನ ಓಡಿಸಿದರಲ್ಲಾ ಅದೇ ರೀತಿ ಇಲ್ಲಿನ ಭಗವದ್ಭಕ್ತರು ಸೇರಿ ಶನೀನ ಓಡಿಸಬೇಕಿತ್ತೂ ಅಂತ ಅನಿಸಿತಯ್ಯಾ....... ಅಂದ.

ಅದ್ಯಾಕೇ.... ಅಂತ ಕೇಳಿದೆ.

ನೋಡು ಇಡೀ ನಿಮ್ಮ ದೇವಕುಲದಲ್ಲಿಯೇ ಅತೀ ಸ್ಯಾಡಿಷ್ಟ್ ದೇವರು ಅಂದರೆ ಈ ಶನಿ. ಜನರಿಗೆ ತೊಂದರೆ ಕೊಟ್ಟು ಖುಷಿ ಪಡೋ ದೇವರನ್ನ ಎಲ್ಲಾದರೂ ನೋಡಬೇಕು ಅಂದರೆ ಇಲ್ಲೇನೆ - ಈ ದೇಶದಲ್ಲೇನೇ. ದೇವರು ನಮ್ಮನ್ನ ಕಾಪಾಡೋದಕ್ಕೆ ಇದೆ ಅಂತ ನಾವು ಅಂದುಕೋತೇವೆ. ಅಲ್ಲಯ್ಯಾ ಯಾವುದಾದರೂ ದೇವರು ಹೀಗೆ ಬೇರೆಯವರಿಗೆ ಹಿಂಸೆ ಕೊಟ್ಟು ಸಂತೋಷ ಪಡುತ್ತೆ ಅಂದರೆ ನಂಬುಕ್ಕೆ ಆಗುತ್ತೇನಯ್ಯಾ? ಅದು ದೇವರಲ್ಲ, ದೆವ್ವ ಅಂತ ಹೇಳಬೇಕು ಅಷ್ಟೇ... ಒಂದೂವರೆ ಘಂಟೆ ಅವನ ಐಡಿಯಾ ಬಿಟ್ಟ.

ನಾನೂ ತೆಪ್ಪಗೆ ತಲೆಯಾಡಿಸಿದೆ.

ಅದಕ್ಕೇ ನಾನೊಂದು ಪ್ಲಾನ್ ಮಾಡಿದೀನಿ. ಶನಿಭಕ್ತರನ್ನೆಲ್ಲಾ ಸೇರಿಸಿ ನಮ್ಮ ಭೂಮಂಡಲದಿಂದ ಶನೀನ ದೇವರೇ ಅಲ್ಲ ಅಂತ ತೀರ್ಮಾನ ತಗೊಂಡು ಓಡಿಸಿಬಿಡೋಣಾಂತ ಇದೀನಿ... ಅಂದ!

ದೊರೇ ಮಷಾರು. ಈಗ ಅರ್ಧ ಜನ ಬದುಕ್ತಿರೋದೇ ಶನಿ ಭಯ ಇರೋಜನರಿಂದ. ಶನಿ ದೇವರೇ ಅಲ್ಲ ಅಂದರೆ ಅರ್ಧ ಜನ ಕಳ್ಳರು ಕಾಕರು ಪುಂಡರು ಆಗಿಬಿಟ್ಟು ಮಿಕ್ಕ ಅರ್ಧಜನರನ್ನ ಹರಿದು ತಿಂದು ನರಭಕ್ಷಕರಾಗಿಬಿಡ್ತಾರೆ. ಜನ ಬದುಕಬೇಕು ಅಂದರೆ ಇನ್ನೂ ಸಾವಿರ ಸ್ಯಾಡಿಷ್ಟ್ ದೇವರುಗಳು ಹುಟ್ಟಲೇ ಬೇಕು... ಅಂತ ನಾನೂ ಎರಡು ಘಂಟೆ ಹೇಳೀದೀನೀ.

ಸರಿ ತಾನೇ?

★★★

ಪ್ರಬಂಧಾಪ್ರಕರಣ

- ಸುಗ್ಗನಹಳ್ಳಿ ಷಡಕ್ಷರಿ

ಏನಾದ್ರೂ ಬರೀಬೇಕು—ಪತ್ರಿಕೆಗಳಿಗೆ ಕಳಿಸಬೇಕು ...... ಪ್ರಕಟವಾದ ನನ್ನ ಬರಹಗಳಿಗೆ ಅಸಂಖ್ಯಾತ ಓದುಗರಿಂದ ಉತ್ತಮ ಪ್ರತಿಕ್ರಿಯೆ ಬರಬೇಕು ....ಇದು ನನ್ನ ಬಹುದಿನಗಳ ಕನಸು. ಆದರೇನು ಮಾಡಲಿ....... ಬರೆಯಲು ವಿಷಯಗಳೇ ಸಿಗೋದಿಲ್ಲ.

ಈವರೆಗೆ ನಾನು ಸಾಹಿತ್ಯದ ಎಲ್ಲಾ ಪ್ರಾಕಾರಗಳಲ್ಲೂ ಕೈಯಾಡಿಸಿದ್ದೇನೆ. ಅಂದರೆ, ಸಣ್ಣ ಕಥೆ, ಕಾದಂಬರಿ, ಹಾಸ್ಯಲೇಖನ, ಕವನ, ಹನಿಗವನ, ನಾಟಕ – ಎಲ್ಲವನ್ನೂ ಬರೆಯಲು ಪ್ರಯತ್ನಿಸಿದ್ದೇನೆ, ಪ್ರಯತ್ನಿಸಿದ್ದೇನೆ ಅಷ್ಟೆ. ಹಾಗೆಂದು ನಾನು ಯಾವುದೇ ಬರಹವನ್ನು ಪೂರ್ಣಗೊಳಿಸಿಲ್ಲವೆಂದಲ್ಲ. ಕಳೆದ ತಿಂಗಳು ನಾನು ಪತ್ರಿಕೆಗೆ ಕಳಿಸಿದ ಕವನವನ್ನು ಎಷ್ಟು ಕಷ್ಟಪಟ್ಟು ಪೂರ್ಣಗೊಳಿಸಿದೆ. ನನ್ನ ಭಾವನೆಗಳನ್ನೆಲ್ಲಾ ಅದರಲ್ಲಿ ತುಂಬಿ ವರ್ಣಿಸಿದ್ದೆ. ಅಬ್ಬಾ, ಕೇಂದ್ರ ಸಾಹಿತ್ಯ ಅಕಾಡೆಮಿಯವರಿಗೇನಾದರೂ ನನ್ನ ಕವನ ಓದುವ ಅವಕಾಶ ಸಿಕ್ಕಿದ್ದರೆ ಖಂಡಿತ ಈ ಸಾಲಿನ ಅಕಾಡೆಮಿ ಪ್ರಶಸ್ತಿ ನನಗೇ ಬರುತ್ತಿತ್ತು. ಆ ನಿರೀಕ್ಷೆಯಲ್ಲೇ ಇದ್ದ ನನಗೆ ಪತ್ರಿಕೆಯವರಿಂದ ಬಂದ ಪತ್ರ ನಿರಾಸೆಯನ್ನುಂಟುಮಾಡಿತು. ನನ್ನ ಕವಿತೆ ಹಿಂದಕ್ಕೆ ಬಂದಿದ್ದಕ್ಕಲ್ಲ...... ಕವಿತೆ ಅಂದು ಪ್ರಬಂಧ ಕಳಿಸಿದ್ದೀರಲ್ಲ ಎಂದು ಸಂಪಾದಕರು ಆಕ್ಷೇಪಿಸಿದ್ದರಿಂದ.

ನಿಧಾನವಾಗಿ ಯೋಚಿಸಿದಾಗ ಸಂಪಾದಕರ ವಿಷಾದದ ಪತ್ರ ನನಗೇನೂ ಬೇಸರ ತರಲಿಲ್ಲ. ಏಕೆಂದರೆ ನನ್ನ ಕವನ ಪ್ರಬಂಧದ ಹಾಗಿದೆ ಅಂದು ಪರೋಕ್ಷವಾಗಿ ಅವರು ನನಗೆ ಪ್ರಬಂಧ ಬರೆಯೋ ಯೋಗ್ಯತೆ ಇದೆ ಅಂದು ತೋರಿಸಿಕೊಟ್ಟರಲ್ಲ..

ಸರಿ, ಅಂದೇ ಶುರು ಮಾಡಿದೆ ಪ್ರಬಂಧ ಬರೆಯೋಕೆ. ಅಯ್ಯೋ ನನ್ನ ಫಜೀತಿ ಏನಂತೀರಿ? ಫುಲ್‌ಸ್ಟಾಪ್, ಕಾಮ ಮುಂತಾದ ಚಿನ್ಹೆಗಳ ಬಳಕೆ ಇಲ್ಲದೆ ಕವನ ಬರೆಯುತ್ತಿದ್ದ ನನಗೆ ಈಗ ಅವುಗಳನ್ನು ಎಲ್ಲೆಲ್ಲಿ ಬಳಸಬೇಕೋ ತಿಳೀದೆ ನಾನು ಪಟ್ಟ ಫಜೀತಿ ಏನಂತೀರಿ.

ಅಂತೂ ಪ್ರಬಂಧವೊಂದು ತಯಾರಾಯಿತು. ಶೀರ್ಷಿಕೆ ಏನು ಗೊತ್ತೆ? "ಬರಹಗಾರನ ಬವಣೆ" ಎಷ್ಟೊಂದು ಅರ್ಥಗರ್ಭಿತ ಅಲ್ಲವೇ? ಅಬ್ಬಾ. ಬರಹಗಾರನ ಎಲ್ಲ ರೀತಿಯ ಬವಣೆಗಳನ್ನು ಅದರಲ್ಲಿ ಮನಮಿಡಿಯುವಂತೆ ವರ್ಣಿಸಿದ್ದೆ.

ನನ್ನ ಪ್ರಬಂಧದಲ್ಲಿ ಎಲ್ಲ ಪತ್ರಿಕೆಗಳ ಸಂಪಾದಕರ ಟೀಕೆ ಮುಖ್ಯ ವಸ್ತುವಾಗಿತ್ತು. ಬರಹಗಾರರು ಎಷ್ಟೆಲ್ಲ ಶ್ರಮವಹಿಸಿ ಒಂದು ಕಥೆ/ಕವನ/ಲೇಖನ ಸಿದ್ಧಪಡಿಸುತ್ತಾರೆ. ಶ್ರಮದ ಜೊತೆಗೆ ಕಾಗದ, ಪೆನ್ನು, ಇಂಕು ಮತ್ತು ಅತಿ ತುಟ್ಟಿಯಾದ ಅಂಚೆವೆಚ್ಚ. ಈ ಸಂಪಾದಕರುಗಳಂತೂ ವಿಷಾದ ಪತ್ರವನ್ನು ಲಗತ್ತಿಸಿ ಹಿಂದಿರುಗಿಸಿಬಿಡುತ್ತಾರೆ. ಅದೂ

ನಾವೇ ಸ್ಟಾಂಪಿಟ್ಟು ಕಳುಹಿಸಿದ ಸ್ವವಿಳಾಸದ ಲಕೋಟೆಯಲ್ಲಿ. ಅಂತೂ ಕಷ್ಟಪಟ್ಟು ಸಿದ್ಧಪಡಿಸಿದ ನನ್ನ ಪ್ರಬಂಧವನ್ನು ಪತ್ರಿಕೆಯೊಂದಕ್ಕೆ ಕಳಿಸಿ ಮಾರನೇ ದಿನದಿಂದ ನನ್ನ ಎಂದಿನ ನಿರೀಕ್ಷೆಯಲ್ಲಿ ಕಾಯುತ್ತಾ ಕುಳಿತೆ. ಲೇಖನ ಕಳಿಸಿದ ಮೇಲೆ ಅಂಚೆಪೇದೆಯನ್ನು ಕಾಯುತ್ತಾ ಕೂಡುವುದು ನನಗೆ ಒಗ್ಗಿಹೋಗಿತ್ತು.

ಪ್ರತಿ ಸಾರಿಯಂತೆ ಈ ಸಲವೂ ನನ್ನ ಪ್ರಬಂಧ ವಿಷಾದದೊಂದಿಗೆ ಹಿಂದಿರುಗುವುದು ಖಾತ್ರಿಯಾದರೂ (ಒಂದೂ ಪ್ರಕಟವಾಗಿಲ್ಲವಲ್ಲ) ಯಾವುದೋ ಒಂದು ಮೂಲೆಯಲ್ಲಿ ಪ್ರಕಟವಾಗಬಹುದೆಂಬ ಆಸೆಯೂ ಇತ್ತು.

ವಾರವಾಯಿತು, ಹದಿನೈದು ದಿನವಾಯಿತು, ತಿಂಗಳಾಯಿತು....... ಊಹೂಂ... ಹಿಂತಿರುಗಲಿಲ್ಲ .... ಅಂದರೆ— ಹೌದು—

ನನ್ನ ಪ್ರಬಂಧ ಪ್ರಕಟವಾಗಬಹುದು... ಜೇಬುಗಳನ್ನೆಲ್ಲಾ ತಡಕಿ, ಇದ್ದಬದ್ದ ಚಿಲ್ಲರೆಯನ್ನೆಲ್ಲಾ ಒಟ್ಟು ಮಾಡಿ. ಪೋಸ್ಟ್‌ಕಾರ್ಡ್ ತರಲು ಅಂಚೆ ಕಛೇರಿಗೆ ಹೊರಟೆ. ಪ್ರಬಂಧ ಪ್ರಕಟವಾದ ಮೇಲೆ ಓದುಗರು ಮೆಚ್ಚಿ ಬರೆಯುವ ಪತ್ರಗಳಿಗೆ ಉತ್ತರಿಸಲು ಆ ಸಮಯದಲ್ಲಿ ನನ್ನಲ್ಲಿ ಹಣವಿಲ್ಲದಿದ್ದರೆ ಎಂದು ನನ್ನ ದೂರಾಲೋಚನೆ. ಪತ್ರಿಕೆಯಿಂದ ಬರುವ ಸಂಭಾವನೆಯಲ್ಲಿ ಧರ್ಮಸ್ಥಳದ ಮಂಜುನಾಥನಿಗೆ ಒಂದು ಪಾಲು ಕೊಡುವುದಾಗಿ ಹರಕೆ ಹೊತ್ತು ಮನೆಯ ಬಾಗಿಲಿಗೆ ಬಂದೆ. ಎದುರಿಗೆ ನನ್ನ ಒಬ್ಬನೇ ಗೆಳೆಯ ಕೊರಮೇಶಿ ಏದುಸಿರು ಬಿಡುತ್ತಾ ಓಡಿಬಂದು "ಗುರು ಯಾವುದೋ ಪತ್ರಿಕೆಯಲ್ಲಿ ನಿನ್ನ ಹೆಸರು ಬಂದಿದೆಯಂತೆ" ಅಂದ. ನನಗಂತೂ ಆಕಾಶವನ್ನೇ ಮುಟ್ಟಿ ನಿಂತ ಅನುಭವ. ಲೈಬ್ರರಿಗೆ ಓಡಿ ಅಂದಿನ ಎಲ್ಲಾ ಪತ್ರಿಕೆಗಳನ್ನೂ ತೆರೆದು ಪುಟಗಳನ್ನೆಲ್ಲಾ ಜಾಲಾಡಿಸಿದೆ. ಉಹುಂ..... ಎಲ್ಲೂ ನನ್ನ ಪ್ರಬಂಧವಿಲ್ಲ. ಸಪ್ಪೆ ಮೋರೆ ಹಾಕಿಕೊಂಡು ಹೊರಗೆ ಹೊರಟೆ. "ಗುರೂ ಇಲ್ಲಿದೆ" ಪತ್ರಿಕೆಯೊಂದನ್ನು ಹಿಡಿದು ಕೊರಮೇಶಿ ಕೂಗಿದ.

ಓಡಿದೆ........ಓದಿದೆ.........ಹೌದು....... ನನ್ನ ಹೆಸರಿತ್ತು....... ನನ್ನ ಪ್ರಬಂಧ ಪ್ರಕಟವಾಗಿತ್ತು........ ಸಾರ್ವಜನಿಕರ ದೂರು ವಿಭಾಗದಲ್ಲಿ.

> ಗಂಡು ಹೇಳುವುದು
> HE (ಹಿ)ತವಾದರೆ
> ಹೆಣ್ಣು ಹೇಳುವುದು
> SHE (ಶೀ)ತವೇ
>
> -ಸುಕೇಶವ

ಆನ್‌ಲೈನ್ ಆಸ್ತಿ

– ಆರೂರು ಲಕ್ಷ್ಮಣ್ ಶೇಟ್

"ಲಮಸ್ಕಾರ ಸಾರ್—ಹಬ್ಬ ಜೋರಾ ಸಾರ್"

ರಸ್ತೇಲಿ ಸಿಕ್ಕ ಮಂಜ ಹಲ್ಲು ಗಿಂಜಿ ನಕ್ಕ

"ದೀಪಾವಳಿ ಅಂದ್ಮೇಲೆ ಸಿಹಿ, ಸಿಡಿಮದ್ದು, ಸುರುಸುರ್ ಬತ್ತಿ ಜೋರಾಗಿರ್ಲೇ ಬೇಕಲ್ಲಪ— ನಿನ್ನ ಹಬ್ಬ ಗಮ್ಮತ್ತೇನಪಾ ಮಂಜಾ" ಅಂತ ಕೇಳಿದೆ.

"ಏನ್ ಹೇಳ್ಲಿಸಾ ನನ್ನ ಗ್ರಹಚಾರ? ಪಟಾಕಿ ಕೈನಲ್ಲೇ ಸಿಡಿದುಬಿಡುತ್ತಾ, ಬ್ಯಾಂಡೇಜ್ ಬಿಚ್ಚೋಕೆ ಇನ್ನೂ ಒಂದು ವಾರ ಬೇಕು ಸಾ"

"ಅಯ್ಯೋ ಪುಣ್ಯಾತ್ಮ, ಮೂಲೇಲಿಟ್ಟು ಬೆಂಕಿ ಹಚ್ಚೋದು ಬಿಟ್ಟು, ಕೈ ಕಸರತ್ತು ಯಾಕೆ ಮಾಡಿದ್ಯೋ? ಈಗ ನೋಡು, ಗ್ರೇಟ್ ಆಗೋ ಭರದಲ್ಲಿ ರಿಗ್ರೆಟ್ ದಕ್ಕಿತು" ಅಂದೆ

"ನಂದೇ ಮಿಸ್ಟೇಕು ಸಾ, ತೆಲಗಿ ಬಾಂಬ್, ರೆಡ್ಡಿಬಾಂಬ್ ಥರಾ ಇದೂ ಠುಸ್ ಆಗುತ್ತೆ ಅಂದುಕೊಂಡಿದ್ದೆ. ಅದು ಬಾಂಬ್ ಆಗಿ ಸ್ಫೋಟಿಸಿಬಿಡ್ತು ಸಾ, ನನ್ನ ಗ್ರಹಗತಿ ಸರಿ ಇಲ್ಲ ಸಾ"

"ಪ್ಲುಟೋ ಗ್ರಹ ಹೋದ್ಮೇಲೆ ಈಗ ಎಂಟು ಗ್ರಹಗಳಷ್ಟೇ ಇವೆಯಂತಲ್ಲೋ"

"ಆದ್ರೆ ಶನಿಗ್ರಹ ಇದ್ದೇ ಇದೆಯಲ್ಲ ಸಾ, ನಮ್ಮನ್ನು ಕಾಡಿಸಿ ಪೀಡಿಸೋಕೆ"

ನನ್ನ ಪಾಲಿಗೆ ಇವನೂ ಹಾಗೇ ಅಂತ ಹೇಳೋಕೆ ಆಗುತ್ತೇ

ಅಂದಹಾಗೆ, ದೀಪಾವಳಿ ವಿಶೇಷಾಂಕಗಳನ್ನು ಓದಿ ಮುಗಿಸಿಬಿಟ್ಯಾ ಮಂಜಾ? ಕೊಶ್ಚನಿಸಿದೆ

'ಓದೋಕೆ ಟೈಮಿಲ್ಲ ಸಾ, ಫಟ್ ಅಂತ ನೆಟ್ ಕನೆಕ್ಷನ್ ಸಿಗೋ ಕಾಲದಲ್ಲಿ ಓದೋದು ಅಂದ್ರೆ ಬೋರು ಸಾ, ಹೈಟೆಕ್ ಕಾಲದಲ್ಲಿ ವಿಶುಯಲ್ ಮೀಡಿಯಾಗಳೇ ತುಂಬಾ ಪವರ್‌ಫುಲ್ ಸಾ, ಬಿಪಿಓ, ಐಟಿ, ಬಿಟಿ, ಕಾಲ್ ಸೆಂಟರ್, ಬ್ಲಾಗು, ಇಂಟರ್ನೆಟ್, ಈಮೇಲ್‌ಗಳ ಸುಗ್ಗಿ ಸಾ, ಎಲ್ಲಾ ಇನ್‌ಸ್ಟೆಂಟ್ ಸಾ"

ಮಂಜನ ಹೊಸ ಅವತಾರ ಕಂಡು ಅಯ್ಯೋ ಪಾಪ ಅನ್ನಿಸಿತು. ಶುದ್ಧ ಕನ್ನಡದಲ್ಲಿ ನಾಲ್ಕಕ್ಷರ ಬರೆಯುವ ತಾಕತ್ತಿಲ್ಲದ ಸೋಂಬೇರಿ ಮಂಜನ ಗತ್ತು, ದೌಲತ್ತು ನಗು ಉಕ್ಕಿಸಿತು.

"ವೆರಿ ಗುಡ್, ಅಂತೂ ವರ್ಷಮುಗೀತಾ ಬಂತು. ಹೊಸ ವರ್ಷದಲ್ಲಿ ನಿನ್ನ ಹೊಸ ಯೋಜನೆ ಏನು ಅನ್ನೋದನ್ನು ಹೇಳಿಬಿಡಪಾ" ಅಂದೆ

"ಒಂದು ಸೈಟ್ ಖರೀದಿ ಮಾಡಿ ಸ್ವಂತ ಮನೆ ಕಟ್ಟಿಸೋ ಮಾಸ್ಟರ್ ಪ್ಲಾನ್ ಇದೆಸಾ"

ಅಂದ. ಕಿವಿತನಕ ಬಾಯಗಲಿಸಿ ನಕ್ಕ, ನಿಂತಲ್ಲೇ ಕುಣಿಯತೊಡಗಿದ. ನಾನು ಮೆಲ್ಲ ಕುದಿಯತೊಡಗಿದೆ.

"ಕಂಗ್ರಾಟ್ಸ್, ಏಳ್ಕೊಳಾಕ್ ಒಂದೂರು, ತಲೆ ಮ್ಯಾಗೆ ಒಂದು ಸೂರು ನಡೀಲಿ ನಮ್ಮ ಮಂಜನ ಕಾರುಬಾರು" ಅಂದೆ.

"ಅನ್ನೊಂದು ವಿಷ್ಯ ಗೊತ್ತಾ ಸಾ, ಇಲ್ಲೆಲ್ಲಾದರೂ ಆಸ್ತಿ ಖರೀದಿ ಮಾಡಿದ್ರೆ, ನೂರೆಂಟು ರಗಳೆ ಸಾ, ಅಕ್ರಮ, ಸಕ್ರಮ, ನಕಲಿ ಕಾಗದ ಪತ್ರ, ಖೋಟಾ ಒಪ್ಪಂದ ಅಂತ ಏನೇನೋ ರಾದ್ಧಾಂತ ಆಗುತ್ತೆ ಸಾ, ನಾವು ನಿತ್ಯ ಪೇಪರಲ್ಲಿ ಓದ್ತಾ ಇದೀವಲ್ಲ ಸಾ"

"ಅದ್ಕೇ"

"ನಾನು, ಕೊಲ್ಕತ್ತಾದ ಅಸೀಸ್ ದಾಸ್ ಗುಪ್ತಾನ ಥರಾ ಚಂದ್ರನ ಮೇಲೆ ಸೈಟ್ ಬುಕ್ ಮಾಡ್ತೀನಿ ಸಾ"

"ಊನೋ ಮಂಜಾ, ನೆನ್ನೆ ರಾತ್ರೆ ನಿದ್ದೆಗೆಟ್ಟು ಯಾವ್ದಾದ್ರೂ ಸಿಡಿಗಳನ್ನ ನೋಡ್ತಾ ಇದ್ಯಾ" ದಿಗಿಲಿನಿಂದ ಕೇಳಿದೆ

"ಅಲ್ಲ ಸಾ, ಡುಪ್ಲಿಕೇಟ್ ಸಿಡಿಗಳನ್ನು ಪಿಳಪಿಳ ಕಣ್ಣರಳಿಸಿ ನೋಡೋಕೆ ನನಗೆ ಇಂಟರೆಸ್ಟ್ ಇಲ್ಲ ಸಾ"

"ಮತ್ತೇನೋ ಇದು ಆನ್‌ಲೈನ್ ಆಸ್ತಿ"

"ಅದೇ ಸಾ, ದಾಸ್ ಗುಪ್ತ ಒಂದು ನೂರು ಅಮೆರಿಕನ್ ಡಾಲರ್ ತೆತ್ತು ಅಂತರ್ಜಾಲದಲ್ಲಿ ಎರಡು ಎಕ್ರೆ ನಿವೇಶನ ಖರೀದಿ ಒಪ್ಪಂದ ಮಾಡಿಕೊಂಡಿದಾನಂತಲ್ಲ ಸಾ, ನಾನೂ ಹಾಗೆ ಸಾ, ಚಂದ್ರನ ಮೇಲೆ ಮೂರು ಗುಂಟೆ ಜಾಗಕ್ಕೆ ನೋಂದಣಿ ಮಾಡೋ ನೈಸ್ ಯೋಜನೆ ಹಾಕ್ಕೊಂಡಿದೀನಿ ಸಾ, ರೆಡ್ಡಿ, ಬಡ್ಡಿ, ಕಡ್ಡಿಗಳ ತಾಪತ್ರಯ ಇಲ್ಲ ಸಾ, ಹಾಲು ಬೆಳದಿಂಗಳಲ್ಲಿ ಮಧುಚಂದ್ರದ ಮಜಾ ಸಾ"

"ಆನ್‌ಲೈನ್ ಆಸ್ತಿಗೆ ಶುಭವಾಗಲಿ. ಇಲ್ಲಿ ನೀನು ಅಲೆಮಾರಿ ಆದ್ರೂ ಪರವಾಗಿಲ್ಲ, ಚಂದ್ರನ ಮೇಲೆ ಚಂದದಿಂದ ಬಾಳು" ಎನ್ನುತ್ತಾ ಜಾಗ ಖಾಲಿ ಮಾಡಿದೆ. ಮಂಜ ಮಾಯವಾದ. ನಾನು ಬಚಾವಾದೆ.

ಪ್ರಶ್ನೆ

ಈಗ ಎಲ್ಲಿ ನೋಡಿದರೂ
ರಸಪ್ರಶ್ನೆ ಕಾರ್ಯಕ್ರಮ
ಪ್ರಶ್ನೆ ಸಾಕು
ರಸ ಬೇರೆ ಬೇಕೆ?
ವಿಷಪ್ರಶ್ನೆ ಎಂಬುದೂ
ಉಂಟೇ ?

– ಸಿ.ಪಿ.ಕೆ

ಸಂಪಾದಕೀಯ

ಪ್ರಿಯ ಓದುಗರೇ,

ನಿಮಗೆಲ್ಲಾ ದಸರಾ, ದೀಪಾವಳಿ ಹಬ್ಬದ ಶುಭಾಶಯಗಳು.

ಕೊರವಂಜಿಯ ಜನಕ ಹಾಗೂ ಕನ್ನಡ ಹಾಸ್ಯ ಪ್ರಪಂಚದ ಒಂದು ಧ್ರುವತಾರೆಯಾಗಿ ಮೆರೆದ ರಾ.ಶಿ.ಯವರ ಆಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ಪ್ರಾರಂಭವಾದ ಅಪರಂಜಿ ಮಾಸಪತ್ರಿಕೆ ನಿಮ್ಮೆಲ್ಲರ ಸಹಾಯ, ಸಹಕಾರ, ಪ್ರೋತ್ಸಾಹ ಇವುಗಳಿಂದಾಗಿ ಪ್ರತಿ ತಿಂಗಳು ನಿಮ್ಮ ಮನೆಯನ್ನು ತುಂಬುತ್ತಿದ್ದಾಳೆ.

ನಿಮ್ಮೆಲ್ಲರ ಸಹಕಾರದಿಂದ ಅಪರಂಜಿ ಚನ್ನಾಗಿ ತರುವುದು ಸಾಧ್ಯವಾಗುತ್ತಿದೆ. ಅಪರಂಜಿಗೆ ಈಗ 24 ತುಂಬಿದೆ. ಇಷ್ಟು ವರ್ಷಗಳು ಅಪರಂಜಿ ತನಗೆ ಬರುತ್ತಿದ್ದ ಚಂದಾ ಹಣದಿಂದಲೇ ಉಳಿದುಕೊಂಡು ಬಂದಿದೆ. ಈ ದಿಸೆಯಲ್ಲಿ ನಮ್ಮ ಎಲ್ಲ ವಾರ್ಷಿಕ ಹಾಗೂ ಹತ್ತು ವರ್ಷದ ಚಂದಾದಾರರ ಸಹಕಾರವನ್ನು ನೆನೆಯಲೇ ಬೇಕು.

ಆದರೆ ಒಂದು ಪತ್ರಿಕೆ ಬರೀ ಚಂದಾ ಹಣದಿಂದಲೇ ನಡೆಯುವುದು ಅಸಾಧ್ಯದ ಮಾತು. ಹೀಗಾಗಿ ಅಪರಂಜಿ ಜಾಹೀರಾತು ಸಂಗ್ರಹಣೆಯತ್ತ ಗಮನ ಹರಿಸುವುದು ಅನಿವಾರ್ಯವಾಗಿದೆ. ನಮ್ಮ ಓದುಗ ಮಹನೀಯರುಗಳಲ್ಲಿ ಅನೇಕರು ಸಂಸ್ಥೆಗಳನ್ನು ನಡೆಸುವವರಿದ್ದಾರೆ, ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದವರಿದ್ದಾರೆ, ಜಾಹೀರಾತು ಒದಗಿಸಿಕೊಡುವ ಸ್ಥಿತಿಯಲ್ಲಿದ್ದಾರೆ. ಅಪರಂಜಿ ಎಲ್ಲ ಓದುಗ ಮಹನೀಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವುಗಳು ಮನಸ್ಸು ಮಾಡಿ ಅಪರಂಜಿಗೆ ಸಾಧ್ಯವಾದಷ್ಟು ಜಾಹೀರಾತು ಒದಗಿಸಿಕೊಟ್ಟು ಅಪರಂಜಿಯ ಹಾಸ್ಯ ಸಮಾರಾಧನೆ ನಿರಂತರವಾಗಿ ನಡೆಯಲು ತಾವೂ ಕೈ ಜೋಡಿಸಿ ಎಂದು. ಜಾಹೀರಾತು ದರದ ವಿವರಗಳು ಈ ಕೆಳಕಂಡಂತಿವೆ.

1, ಹೊರ ರಕ್ಷಾಪುಟ	-	ರೂ. 25,000/-	(12 ಸಂಚಿಕೆಗಳು)
2. ಒಳ ರಕ್ಷಾಪುಟ	-	ರೂ. 20,000/-	(12 ಸಂಚಿಕೆಗಳು)
3. ಒಳ ಪುಟಗಳು	-	ರೂ. 10,000/-	(12 ಸಂಚಿಕೆಗಳು)
4. ಪೂರ್ಣ ಪುಟ	-	ರೂ. 1,000/-	(ಒಂದು ಸಂಚಿಕೆಗೆ)
5. ಅರ್ಧ ಪುಟ	-	ರೂ. 500/-	(ಒಂದು ಸಂಚಿಕೆಗೆ)

ನಿಮ್ಮ ಜಾಹೀರಾತು ಸಾಮಗ್ರಿ ಮತ್ತು ತತ್ಸಂಬಂಧವಾದ ಚೆಕ್ಕು / ಡ್ರಾಫ್ಟ್‌ಗಳನ್ನು ಶ್ರೀ ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ', 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿಟಿಎಂ ಒಂದನೇ ಹಂತ, ಬೆಂಗಳೂರು 560 068, ಈ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ

ಅಪರಂಜಿ ಕೈಗೊಂಡು ಇಂದಿನವರೆಗೂ ನಡೆಸಿಕೊಂಡು ಬಂದಿರುವ ನಗೆ ವ್ಯವಸಾಯದಲ್ಲಿ ತಾವೂ ಕೈ ಜೋಡಿಸುವಿರೆಂದು ನಂಬಿದ್ದೇವೆ.

– ಬೇಲೂರು ರಾಮಮೂರ್ತಿ

ಉಪಸಂಪಾದಕರು

ವಿದ್ಯಮಾನಗಳು

– ಕು.ಶ.

ಬಂಕಿಮ್ ಚಂದ್ರ ಚಟರ್ಜಿ ವಂದೇಮಾತರಂ ಗೀತೆ ರಚಿಸಿದ್ದು 136 ವರ್ಷಗಳ ಹಿಂದಂತೆ. ಆದರೆ ಇಳಿ ವಯಸ್ಸಿನ ನಮ್ಮ ಎಚ್‌ಆರ್‌ಡಿ ಮಿನಿಸ್ಟರ್‌ಗೆ ಇದ್ದಕ್ಕಿದ್ದ ಹಾಗೆ 2006ರಲ್ಲಿ ವಂದೇಮಾತರಂ ಶತಾಬ್ದಿ ಆಚರಿಸಬೇಕು ಎನ್ನುವ ಸ್ಫೂರ್ತಿ ಬಂತು. ಇಂತಹ ದಿವಸ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಈ ರಾಷ್ಟ್ರೀಯ ಹಾಡನ್ನು ಹಾಡಬೇಕು ಎನ್ನುವ ಸನ್ನದ್ದು ಹೊರಡಿಸಿದರು. ಹಳೆ ವಿವಾದ ಮತ್ತೆ ಬುಗಿಲೆದ್ದಿತು. ಹೀಗೆ ಹಾಡುವುದು ಕಡ್ಡಾಯವಲ್ಲ ಇಷ್ಟವಿಲ್ಲದವರು ಹಾಡಬೇಕಾಗಿಲ್ಲ ಎನ್ನುವ ತಿದ್ದುಪಡಿ. ಎಲ್ಲವೂ ಸರಿಯಾಗಬೇಕಾಗಿತ್ತು. ಆದರೆ ಕಾಂಗ್ರೆಸ್ ಪಕ್ಷದ ಸುಪ್ರೀಂ ನಾಯಕಿಗೆ ಹಾಡಿದರೆ ಒಂದು ಕಷ್ಟ ಹಾಡದಿದ್ದರೆ ಇನ್ನೊಂದು ತೊಂದರೆ. ಇಂತಹ ಇಕ್ಕಟ್ಟಿಗೆ ತನ್ನನ್ನು ಸಿಕ್ಕಿಸಿದ ಮಂತ್ರಿಗಳ ಮೇಲೆ ಅವರಿಗೆ ಕೆಂಡಾಮಂಡಲ ಕೋಪವಂತೆ. ಸೆಕ್ಯುಲರ್‌ಗಳಲ್ಲಿ ಸೆಕ್ಯುಲರ್ ಮೋಸ್ಟ್ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಮಂತ್ರಿಗಳು ಈಗ ಕೈಕೈ ಹಿಸುಕಿಕೊಳುತ್ತಿದ್ದಾರಂತೆ.

ಮಧು ಕೋಡಾ ಎನ್ನುವ ಶುಭನಾಮದ ವ್ಯಕ್ತಿ ಎರಡು ವರ್ಷಗಳ ಹಿಂದೆ ಜಾರ್ಖಂಡ್ ರಾಜ್ಯದಲ್ಲಿ ಸಾಧಾರಣ ಬಿಜೆಪಿ ಕಾರ್ಯಕರ್ತ, ವಿಧಾನಸಭೆ ಚುನಾವಣೆ ಬಂದಾಗ ಪಕ್ಷದ ಟಿಕೆಟ್ ಅಭ್ಯರ್ಥಿ. ಟಿಕೆಟ್ ಸಿಗದ ಮೇಲೆ ಸರ್ವತಂತ್ರ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ, ವಿಜಯ. ಆ ಚುನಾವಣೆಯಲ್ಲಿ ಸ್ವತಂತ್ರ ಸದಸ್ಯರ ಭಾಗ್ಯದ ಬಾಗಿಲು ತೆಗೆದ ಅತಂತ್ರ ವಿಧಾನಸಭೆ. ಎಂಬತ್ತೆರಡು ಸದಸ್ಯರ ವಿಧಾನ ಸಭೆಯಲ್ಲಿ 39 ಸದಸ್ಯಬಲವಿದ್ದ ಎನ್‌ಡಿಎ ಚೇರೆ ನಾಲ್ಕೈದು ಸದಸ್ಯರ ನೆರವು ಪಡೆಯಲೇಬೇಕಾದ ಅನಿವಾರ್ಯತೆ. ಮಾರುಕಟ್ಟೆಯಲ್ಲಿ ಕುದುರೆಗಳ ಬೆಲೆ ಗಗನಕ್ಕೆ. ಕೋಡಾ ಫಲವತ್ತಾದ ಇಲಾಖೆಯ ಕ್ಯಾಬಿನೆಟ್ ಮಂತ್ರಿ. ಎರಡೇ ವರ್ಷಗಳಲ್ಲಿ ರಾಜ್ಯದಲ್ಲಿ ಮತ್ತೆ ಭಿನ್ನಮತ. ಈಗ ಕುದುರೆ ವ್ಯಾಪಾರ ಸುತರಾಂ ಇಲ್ಲ. ಏನಿದ್ದರೂ ಆನೆ ವ್ಯಾಪಾರ! ಈಗ ಸನ್ಮಾನ್ಯ ಕೋಡಾ ರಾಜ್ಯದ ಮುಖ್ಯಮಂತ್ರಿ. ನಾಯಿ ಬಾಲವನ್ನು ಆಡಿಸುವ ಬದಲು ಬಾಲವೇ ನಾಯಿಯನ್ನು ಆಡಿಸಿದಂತೆ ಎನ್ನುವ ಮಾತಿಗೆ ಎಷ್ಟು ಒಳ್ಳೆಯ ಉದಾಹರಣೆ! ಅಲ್ಲಿ ಕೋಡಾ ಮುಮಂ ಆಗಬಹುದಾದರೆ ಇಲ್ಲಿ ನಾನೂ ಏಕೆ ರಾಜ್ಯದ ನಂಬರ್ ಒನ್ ಆಗಬಾರದು ಎಂದು ವಾಟಾಳ್ ನಾಗರಾಜ್ ಅಂತಹ ಸ್ವತಂತ್ರ ಸದಸ್ಯರಿಗೆ ಬಾಯಲ್ಲಿ ನೀರು ಬರುತ್ತಿರಬೇಕು!

ರೈಲ್ವೇ ಮಂತ್ರಿ ಲಾಲು ಪ್ರಸಾದ್‌ಗೆ ಈಗ ಮ್ಯಾನೇಜ್‌ಮೆಂಟ್ ಪ್ರೊಫೆಸರ್ ಟೋಪಿಯೂ ಸಿಕ್ಕಿದೆ. ಅಹಮದಾಬಾದಿನ ಐಐಎಂ ವಿದ್ಯಾರ್ಥಿಗಳಿಗೆ ಉತ್ತಮ ಮ್ಯಾನೇಜ್‌ಮೆಂಟ್ ಎಂದರೆ ಏನು ಎಂದು ಅವರು ಕಲಿಸಿದರಂತೆ! ಬಿಹಾರ ರಾಜ್ಯವನ್ನು

ಪ್ರಪಾತಕ್ಕೆ ತಳಿದವರೇ ರೈಲ್ವೇ ಇಲಾಖೆಯ ಸಂಕಟ ವಿಮೋಚನರಾದದ್ದು ಹೇಗೆ? ಉತ್ತರಗಳು ಅನೇಕ. ನನ್ನ ಹೆಂಡತಿಯ ಪ್ರಕಾರ- ಹರಿತ ನಾಲಿಗೆಯೊಂದೆ ಆಸ್ತಿ ಆಗಿರುವ ನಮ್ಮ ಸೀರಿಯಲ್‌ಗಳ ಚೆಂದುಳ್ಳಿ ಚೆಲುವೆಯರು ರಾತ್ರೋರಾತ್ರಿ ಭಾರಿಭಾರಿ ಕಂಪನಿಗಳ ಯಶಸ್ವಿ ಎಂಡಿಗಳಾಗುವಾಗ ಇದು ಯಾವ ಮಹಾ. ಲಾಲು ಅಭಿಮಾನಿ ಹೇಳಿದ್ದು- ನಮ್ಮ ಲೀಡರ್ ದಡ್ಡನಂತೆ ನಟಿಸುವ ಅತಿ ಬುದ್ಧಿವಂತ. ಷೇರ್ ಮಾರ್ಕೆಟ್ ಬಲ್ಲವರು ಹೇಳಿದ್ದು- ನಾಲ್ಕು ಸಾವಿರದ ಸುತ್ತಾ ಗಿರಕಿ ಹೊಡೆಯುತ್ತಿದ್ದ ಸೆನ್ಸೆಕ್ಸ್ ಹನ್ನೆರಡು ಸಾವಿರಕ್ಕೆ ಏರಿದಾಗ ಗಾಂಪರಗುರು ರೈಲ್ವೇ ಮಂತ್ರಿಗಳಾಗಿದ್ದರೂ ಲಾಭ ಜಾಸ್ತಿಯಾಗೇ ಆಗುತ್ತಿತ್ತು. ಇನ್ನೊಬ್ಬರು - ಆಡಳಿತ ಏಕೋ ಫೈನಾನ್ಸ್ ಮ್ಯಾನೇಜ್‌ಮೆಂಟ್ ಏಕೋ, ಪಬ್ಲಿಸಿಟಿ ಏಜಂಟರ ಬೆಂಬಲವೊಂದಿದ್ದರೆ ಸಾಕೋ ಎಂದು ತಾಳಹಾಕಿಕೊಂಡು ಹಾಡುತ್ತಿದ್ದಾರೆ.

ಈಗ ಪ್ರಪಂಚದಲ್ಲೆಲ್ಲಾ Anti-war - ಯುದ್ಧ ವಿರೋಧಿ ಅಲೆಯಿದೆ. ಎಲ್ಲರೂ ಯುದ್ಧ ಬೇಡ, ಎಂದೆಂದಿಗೂ ಬೇಡ, ಖಂಡಿತವಾಗಿ ಬೇಡ ಎನ್ನುತ್ತಿದ್ದಾರೆ. ಆದರೆ ಧರಣಿಮಂಡಲ ಮಧ್ಯದ ಕರ್ನಾಟಕದಲ್ಲಿ ಮಾತ್ರ ಈಗ ಎಲ್ಲೆಲ್ಲೂ ಯುದ್ಧದ ಮಾತೇ ಮಾತು. ಒಬ್ಬರು ರಣಕಹಳೆ ಊದಿದರೆ ಇನ್ನೊಂದು ಪಕ್ಷ ರಣವೀಳ್ಯ ಕೊಡುತ್ತಿದೆ. ತಾಕತ್ ಇದ್ದರೆ ಹಾಗೆ ಮಾಡಿ ಹೀಗೆ ಮಾಡಿ ಎನ್ನುವ ಸವಾಲುಗಳು, ಅವುಗಳಿಗೆ ಜವಾಬುಗಳು. ರಣನೀತಿಗಳು, ವ್ಯೂಹ - ಪ್ರತಿವ್ಯೂಹಗಳ ಬಗೆಗೆ ಪ್ರತಿದಿನ ಸುದ್ದಿಗಳು. ವಿಶ್ವವನ್ನೇ ವ್ಯಾಪಿಸಿರುವ ಯುದ್ಧ ವಿರೋಧಿ ಅಲೆಗೆ ನಮ್ಮ ರಾಜ್ಯದಲ್ಲಿ ಪ್ರವೇಶವಿಲ್ಲ! ಸುವರ್ಣ ಕರ್ನಾಟಕ ಆಚರಿಸುತ್ತಿರುವಾಗ ಎಂತಹ ವಿಪರ್ಯಾಸ.

ಬಹಳ ಹಿಂದೆ ಕೇಳಿದ್ದ ಒಂದು ಕಥೆ: ಒಬ್ಬ ಮಹಾರಾಜ ತಪಸ್ಸು ಮಾಡುತ್ತಿದ್ದ ಋಷಿಯ ಕೊರಳಿಗೆ ಸತ್ತ ಹಾವನ್ನು ಹಾರವಾಗಿ ಹಾಕಿ ಕಿಸಿಕಿಸಿ ನಕ್ಕಿದ್ದನಂತೆ. ಆ ಋಷಿ ಹಾವಿನಿಂದಲೇ ನಿನಗೆ ಮರಣ ಬರಲಿ ಎಂದು ರಾಜನಿಗೆ ಶಾಪಕೊಟ್ಟ. ರಾಜ ತನ್ನ ದೇಶದಲ್ಲಿದ್ದ ಎಲ್ಲಾ ಹಾವುಗಳನ್ನೂ ನಾಶಮಾಡಿಸಿದ. ಇನ್ನೂ ಹೆಚ್ಚಿನ ಎಚ್ಚರಿಕೆಗಾಗಿ ಎಲ್ಲಿಂದಲೂ ಒಂದು ಕ್ರಿಮಿಯೂ ಪ್ರವೇಶಿಸಲು ಸಾಧ್ಯವಿಲ್ಲದ ಗಾಜಿನ ಮನೆಯಲ್ಲಿಯೇ ವಾಸಿಸುತ್ತಿದ್ದ. ಆದರೆ ಋಷಿಯ ಶಾಪ ಸುಳ್ಳಾಗಲಿಲ್ಲ, ಒಂದು ನಿಂಬೆಹಣ್ಣಿನಲ್ಲಿ ಹುಳುವಾಗಿ ಬಂದ ಹಾವು ರಾಜನನ್ನು ಕಚ್ಚಿ ಸಾಯಿಸಿತು. ಈಚೆಗೆ ಮೊಸಳೆಗಳೊಂದಿಗೆ ಆಡಿ, ಹೋರಾಡಿ ಜನರನ್ನು ರಂಜಿಸುತ್ತಿದ್ದ, ವೈಲ್ಡ್ ಲೈಫ್ ವಿಡಿಯೋಗಳಲ್ಲಿ ಆಸಕ್ತಿಯಿದ್ದವರ ಹೀರೋ ಸ್ಟೀವ್ ಇರ್ವಿಂಗ್ ತೊರ್ಕೆ ಎನ್ನುವ ಜಾತಿಯ ಮೀನಿನಿಂದ ಹೊಡೆಸಿಕೊಂಡು ಅಸು ನೀಗಿದ ಸುದ್ದಿ ಓದಿದಾಗ ಈ ಕಥೆ ಜ್ಞಾಪಕಕ್ಕೆ ಬಂದಿತು.

★★★★★

ಉಕ್ತಿ ಚಾಟೋಕ್ತಿ

- ಎನ್. ರಾಮನಾಥ್

ಶಾಲೆ ಮಾನ್ಯತೆ ರದ್ದು : ಸರ್ಕಾರದ ಕ್ರಮಕ್ಕೆ ಸಾಹಿತಿಗಳ ಬೆಂಬಲ-ಸುದ್ದಿ

ಸಾಹಿತಿಯೆನೆ ಇಡೀವಿಶ್ವಕೆ ಸಚಿವನು ಎಂಬುದನಿವರು ತಿಳಿದಿಲ್ಲ
ಕುರುಡಭಿಮಾನವು ಮಕ್ಕಳ ಭವಿಷ್ಯ ಕೆಡಿಸುವುದೆಂದಿಗು ತರವಲ್ಲ

★★★

ಕುಮಾರಸ್ವಾಮಿಗೆ ಚಿತ್ರ ನಿರ್ಮಾಣ ಮಾಡುವ ಇಚ್ಛೆ - ಸುದ್ದಿ

ನಾಯಕ ಗೌಡರು ನಾಯಕಿ ಸೋನ್ಯಾ **camera 'cd'** ರೆಡ್ಡಿಯದೇ
ನಿರ್ದೇಶನ, ಕಥೆ, ಗೀತೆ, ಗಾಯನ, ಸಂಕಲನಗಳು ಗೌಡರದೇ

★★★

ದಸರಾ ಕನ್ನಡಿಗರ ಸ್ವಾಭಿಮಾನದ ಹಬ್ಬ - ಜಿ.ನಾರಾಯಣ

ನಾರಾಯಣರಿಗೆ ಹೊಸಹೊಸ ವಿರುದ್ಧ ಪದಗಳ ಮಾಹಿತಿ ಸಿಕ್ಕಿರದು
ಸ್ವಾಭಿಮಾನಕೆ ಕನ್ನಡಿಗ ಪದ ವಿರುದ್ಧ ಪದವೇ ಆಗಿಹುದು

★★★

ದೇವೇಗೌಡ ಬಹುರಂಗಿ ಪ್ರವೀಣ - ಬಿ.ಆರ್. ಪಾಟೀಲ್ -

ಊಸರವಳ್ಳಿಗೆ ಅಂತೆಯೆ ಕರೆದರೆ ಹಳಿದಂತಾಗದು ತಿಳಿಯಣ್ಣ
ರಾಜಕಾರಣದಿ **qualification**ಎ ಬಹುರಂಗಿತ್ವವು ಅರಿಯಣ್ಣ

★★★

ಲೈಂಗಿಕತೆ ಬಗೆಗೆ ಮಡಿವಂತಿಕೆ ಬೇಕೆ? ಪ್ರಜಾವಾಣಿ ಚರ್ಚೆ

ಬೇಡ ಎನ್ನುವರು ಭಾಷಣ ಚತುರರು **mtv ftv** ಗಳು
ಮುಕ್ತತೆ ಇರಲಿ ತೆಗೆಯಿರಿ ಎಲ್ಲವನೆಂದಶ್ಲೀಲವ ಮೆರೆಸುವರು

★★★

ಅಯೋಗ್ಯರು ಕೆಳಗಿಳಿಯಲಿ - ನ್ಯಾ. ವೆಂಕಟಾಚಲ

ಅಧಿಕಾರದಿ ಬರಿ ಯೋಗ್ಯರೆ ಇದ್ದರೆ ಬಹಳವೆ ಕಷ್ಟವು ಆಗುವುದು
ಲೋಕಾಯಕ್ತ **CBI** ಗಳು ಕೆಲಸವೆ ಇಲ್ಲದೆ ಬಳಲುವುವು

★★★

ಲಾಡೆನ್ ಬೇಟೆಗಾಗಿ ಅಮೆರಿಕ ತನ್ನ ಸೈನ್ಯವನ್ನು ಪಾಕಿಸ್ತಾನಕ್ಕೆ
ನುಗ್ಗಿಸಲಿಕ್ಕೂ ತಯಾರು - ಬುಷ್

ಇತರರ ಮನೆಗೆ ನುಗ್ಗುವುದಕ್ಕೆ ತಯಾರು ಅಮೆರಿಕ ಎಂದೆಂದು
ಬಾಂಬೆ ಬಾಂಬಿಗರು ಇರುವರು ನಿಮ್ಮಲಿ ಬರುವೆವು ಸಾವೆನೆ ಅರಚುವರು

★★★

ನಮ್ಮ ಹೊಂದಾಣಿಕೆ HDK ಜೊತೆ ಮಾತ್ರ, ಗೌಡರೊಡನೆ ಅಲ್ಲ - ಭಾಜಪ

ಮಗನೆಂದರೂ ಒಂದೆ ಅಪ್ಪನೆಂದರೂ ಒಂದೆ ಬೇರೆಂದು ತಿಳಿಯದಿರು ಮರುಳೇ
ವಂಶ ಪಾರಂಪರ್ಯ **democracy** ಯ ಲಕ್ಷಣವು ಅಳಿಯದಿದು ಎಂದೆಂದು
ಮರುಳೇ

★★★

ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

ಪಡುಕೋಣೆ ರಮಾನಂದರಾವ್ ಸ್ಮಾರಕ
ನಗೆ ಲೇಖನ ಸ್ಪರ್ಧೆ 2006

ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 4ರಿಂದ 6 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ. 750/-) ಹಾಗೂ ಮೂರನೇ (ರೂ. 500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2006.

ತುಂತುರು

- ಸೆಲ್ ಫೋನ್‌ಗೆ ಅಂಟಿಕೊಂಡವರು: cellf-absorbed
- ಸೆಲ್ ಫೋನ್ ಬಿಟ್ಟವರ ವ್ರತ: cell-ibacy
- Wig - a thatched roof over a bald head
- ಮದುವೆಗಳು ಸ್ವರ್ಗದಲ್ಲಿ ನಡೆಯಬಹುದು. ಆದರೆ ಬಹುಬೇಗ ಭೂಮಿಗೆ ಕುಸಿಯುತ್ತವೆ.
- ಕೈ ಮುಗಿಯುವವನಿಗೆ ಕೈ ಎತ್ತುವ ಅಧಿಕಾರವಿರುವುದಿಲ್ಲ.
- ನನಗೆ ಏನು ಗೊತ್ತಿಲ್ಲವೋ ಅದನ್ನು ಕೇಳಿದರೆ ನಾನು ಉತ್ತರಿಸುವುದಿಲ್ಲ.
- ಒಂದು ದೆವ್ವ ಇನ್ನೊಂದು ದೆವ್ವವನ್ನು ಕೇಳಿತಂತೆ: *ನಿನಗೆ ಮನುಷ್ಯರಲ್ಲಿ ನಂಬಿಕೆ ಇದೆಯೆ?*
- It doesn't make a difference where you come from, unless it shows in what you do.
- ನೀವು ಪರ್ವತದ ಮೇಲಿದ್ದರೆ ನಿಮಗೆ ಮುಂದಿರುವ ಏಕೈಕ ಮಾರ್ಗ ಎಂದರೆ ಕೆಳಗಿಳಿಯುವುದು. ಆಗ ಮೇಲೆ ಎಂಬುದು ನಿಜವಾಗಿಯೂ ಕೆಳಗಿನ ಆರಂಭ ಎಂದು ಹೇಳಬಹುದೆ?
- ಈ ಜಗತ್ತಿನ ಎಲ್ಲ ಪ್ರಾಣಿಗಳನ್ನೂ ರಕ್ಷಿಸುವ ಒಂದು ಪ್ರಾಣಿ ಇದೆ. ಅದು ಯಾವುದು ಗೊತ್ತೆ? ಮನುಷ್ಯ ಪ್ರಾಣಿ.
- ಕ್ಯಾಂಪಸ್‌ನಲ್ಲಿ ರಾಜಕೀಯ ಇದೆ. ಆದರೆ ಅದರಲ್ಲಿ ಹಣವಿಲ್ಲ.
- ನಟನೆ ಎಂದರೆ? ಸಂಭಾಷಣೆಯನ್ನು ತಾಲೀಮು ಮಾಡಿ ನಂತರ ಅದನ್ನು ಮೊದಲ ಬಾರಿಗೆ ಹೇಳುತ್ತಿರುವಂತೆ ಪ್ರೇಕ್ಷಕರಿಗೆ ಒಪ್ಪಿಸುವುದು.
- ಪತ್ರಿಕಾ ಮಾಧ್ಯಮ ಯಾವುದನ್ನು ಬೇಕಾದರೂ ಸತ್ಯವನ್ನಾಗಿಸುತ್ತದೆ.
- ಈ ಪ್ರಕಾಶಕನಿಗೆ ಯಾವಾಗಲೂ ಕುಮಾರಿ ಲೇಖಕರೇ (virgin authors) ಸಿಗುತ್ತಾರೆ ಅವರ ಮೇಲೆ ಅವನು ಅತ್ಯಾಚಾರ ಮಾಡುತ್ತಾನೆ. ಆದುದರಿಂದ ಎರಡನೆ ಬಾರಿ ಯಾವ ಲೇಖಕನೂ ಅವನ ಬಳಿ ಹೋಗುವದಿಲ್ಲ.
- I live alone but I am never left alone

– *ದಂನಾಆ*

Mailing Date:
5th of every month

RNI-KAR KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR